ಅವರಿಗೆ ಸಿಗುತ್ತಿಲ್ಲ. ತಾವು ಈಗಾಗಲೇ ಅವರನ್ನು ಕರೆದು ಮಾತನಾಡುತ್ತೇವೆಂದು ಹೇಳಿದ್ದೀರಿ. ಮಾನ್ಯ ಸಭಾನಾಯಕರು ಈ ವಿಷಯದ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅವರ ಕ್ಷೇತ್ರದಲ್ಲಿ ಶಾಸಕರಾಗಿ ಯಾವುದೇ ರೀತಿಯ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಪೂರ್ಣವಾದ ಮಾಹಿತಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಇಂಥ ಕೆಲಸ ಮುಂದೆ ಆಗಬಾರದು ಎಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಮೂರ್ತಿ ಹಾಗೂ ಮಾನ್ಯ ಗುರುಸ್ವಾಮಿಯವರನ್ನು ನಿಮ್ಮ ಕಛೇರಿಗೆ ಕರೆಸಿ ಈ ವಿಚಾರದ ಬಗ್ಗೆ ನಾನು ಗಮನಹರಿಸುತ್ತೇನೆಂದು ತಾವು ಹೇಳಿದ್ದೀರಿ. ಮಾನ್ಯ ಸದಸ್ಯರುಗಳು ನಿಮ್ಮನ್ನು ಭೇಟಿ ಮಾಡಿದ್ದಾರೆ. ಆದರೆ ಮತ್ತೆ ಇದೇ ರೀತಿಯಾಗಿ ಪುನರಾವರ್ತನೆಯಾಗಿದೆ ಎಂದರೆ ಏನು ಮಾಡುವುದು? ಮಾನ್ಯ ಸದಸ್ಯರು ತಮ್ಮ ಕ್ಷೇತ್ರಕ್ಕೆ ಹೋಗಿ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ, ಈ ದೃಷ್ಟಿಯಲ್ಲಿ ಸರ್ಕಾರದ ನಿಲುವು ಏನು ಎಂಬುದು ಇಲ್ಲಿ ಸ್ಪಷ್ಟಗೊಡಿಸಬೇಕು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗಮನಿಸಿ ಅವರ ಜೊತೆಯಲ್ಲಿ ಈ ಬಗ್ಗೆ ಮಾತನಾಡುತ್ತೇನೆ.

2. ಮುಖ್ಯಮಂತ್ರಿಗಳ ಹೇಳಿಕೆ

ವಿಶ್ವಬ್ಯಾಂಕ್ ಅಧ್ಯಕ್ಷ ಶ್ರೀ ಜೇಮ್ಸ್ ಡಿ. ವುಲ್ಫೆನ್‌ಸನ್ ಅವರ ಕರ್ನಾಟಕ ಭೇಟಿಯ ಕುರಿತು ಹೇಳಿಕೆ.

ವಿಶ್ವ ಬ್ಯಾಂಕ್ ಅಧ್ಯಕ್ಷ ಶ್ರೀ ಜೇಮ್ಸ್ ಡಿ. ವುಲ್ಫೆನ್‌ಸನ್ ಅವರು ನವೆಂಬರ್ 7ರಿಂದ 9ರ ವರೆಗೆ ಕರ್ನಾಟಕಕ್ಕೆ ಭೇಟಿ ನೀಡಿದ್ದರು. ಅವರೊಂದಿಗೆ ಅವರ ಪತ್ನಿ ಶ್ರೀಮತಿ ಎಲೈನ್ ಆರ್. ವುಲ್ಫೆನ್‌ಸನ್, ವಿಶ್ವ ಬ್ಯಾಂಕಿನ ನವದೆಹಲಿ ಕಚೇರಿಯ ನಿರ್ದೇಶಕ (ಭಾರತ) ಶ್ರೀ ಎಡ್ವಿನ್ ಲಿಮ್, ಬ್ಯಾಂಕಿನ ವಾಷಿಂಗ್‌ಟನ್ ಕಚೇರಿಯ ಸಮನ್ವಯಾಧಿಕಾರಿ (ಭಾರತ) ಶ್ರೀಮತಿ ಜೋಯೆಲ್ ಬೆಸಾರ್ಡ್, ಅಂತರರಾಷ್ಟ್ರೀಯ ಆರ್ಥಿಕ ನಿಗಮದ ದಕ್ಷಿಣ ವಿಷ್ಯದ ನಿರ್ದೇಶಕ ಶ್ರೀ ಬರ್ನಾಡ್ ಸ್ಯಾಸ್ಟರ್, ಬ್ಯಾಂಕಿನ ಕಾರ್ಯ ನಿರ್ವಾಹಕ ನಿರ್ದೇಶಕ(ಭಾರತ) ಶ್ರೀ ಬಿ.ಪಿ. ಸಿಂಗ್ ಇವರುಗಳು ಆಗಮಿಸಿದ್ದರು.

ದಿನಾಂಕ 8ನೇ ನವೆಂಬರ್ 2000ದಂದು ಸಂಜೆ ಶ್ರೀ ವುಲ್ಫೆನ್‌ಸನ್ ಅವರು ನನ್ನನ್ನು ನನ್ನ ಸಂಪುಟದ ಮಂತ್ರಿಗಳು ಮತ್ತು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳನ್ನು

ಭೇಟಿ ಮಾಡಿದ್ದರು. ಈ ಭೇಟಿಯ ಸಂದರ್ಭದಲ್ಲಿ ವಿಶ್ವ ಬ್ಯಾಂಕ್ ಅಧ್ಯಕ್ಷರಿಗೆ ರಾಜ್ಯ ಸರ್ಕಾರದ ಸುಧಾರಣಾ ಕಾರ್ಯಕ್ರಮಗಳ ಬಗ್ಗೆ ವಿಷದವಾಗಿ ವಿವರಿಸಲಾಯಿತು. ಆರ್ಥಿಕ ದೃಢತೆ ಸಾಧಿಸುವ ನಿಟ್ಟಿನಲ್ಲಿ, ಸರ್ಕಾರದ ಆದ್ಯತೆಗಳಾದ ಕೃಷಿ, ಗ್ರಾಮೀಣಾಭಿವೃದ್ಧಿ, ಸಮತೋಲಿತ ಪ್ರಾದೇಶಿಕ ಬೆಳವಣಿಗೆ, ಸಾಮಾಜಿಕ ಅಭಿವೃದ್ಧಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಕ್ಷೇತ್ರಗಳಲ್ಲಿನ ಕಾರ್ಯಕ್ರಮಗಳ ಕುರಿತು ದೃಶ್ಯ ಶ್ರವಣ ಪ್ರಾತ್ಯಕ್ಷಿಕತೆ ಮೂಲಕ ವಿವರಣೆ ನೀಡಲಾಯಿತು. ತ್ವರಿತ ಆರ್ಥಿಕ ಬೆಳವಣಿಗೆಯ ಮುಖಾಂತರ ರಾಜ್ಯ ಸರ್ಕಾರ ಬಡತನ ನಿರ್ಮೂಲನೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆಯೂ ತಿಳಿಸಲಾಯಿತು.

ಇತರ ರಾಜ್ಯಗಳಂತೆ ನಾವು ಹಣಕಾಸಿನ ಸಂಕಷ್ಟಕ್ಕೆ ಒಳಗಾದನಂತರ ವಿಶ್ವಬ್ಯಾಂಕನ್ನು ಸಹಾಯಕ್ಕಾಗಿ ಸಂಪರ್ಕಿಸಿಲ್ಲ. ಬದಲಾಗಿ, ಹಣಕಾಸಿನ ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಪ್ರಕಟಣೆ ಮತ್ತು ಹಣಕಾಸು ಸಂಬಂಧ ಒತ್ತಡ ಕಂಡುಬಂದುಹೋದಲೇ ಮದ್ಯಾವಧಿ ಹಣಕಾಸು ಯೋಜನೆ ತಯಾರಿಯಂತಹ ದೂರದೃಷ್ಟಿ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ಒತ್ತು ನೀಡಿ ಪ್ರಮುಖವಾಗಿ ನಮೂದಿಸಲಾಯಿತು. ಈಗಿನ ವರ್ಷ ನಮ್ಮ ಸಾಲ ಸಂಬಂಧದ ಹಣ ಮರುಪಾವತಿ, ರಾಜಸ್ವ ಆದಾಯದ ಶೇ. 20.16ರ ಪ್ರಮಾಣದಲ್ಲಿತ್ತು. ಈ ಪ್ರಮಾಣ ಆಂಧ್ರ ಪ್ರದೇಶದ ಶೇ. 21.63, ಮಹಾರಾಷ್ಟ್ರದ ಶೇ. 25.66, ಒರಿಸ್ಸಾದ ಶೇ. 34.90 ರಾಜಸ್ಥಾನದ ಶೇ. 29.64 ಹಾಗೂ ಉತ್ತರ ಪ್ರದೇಶದ 35.86ಕ್ಕಿಂತ ಉತ್ತಮವಾಗಿದೆ. ಅಲ್ಲದೆ 2000-2001ರ ಸಾಲಿನಲ್ಲಿ ಕೊಡಗಾ ನಮ್ಮ ಸಾಲ ಸಂಬಂಧಿ ಮರು ಪಾವತಿ ರಾಜಸ್ವ ಆದಾಯಕ್ಕೆ ಹೋಲಿಸಿದರೆ ಶೇ. 23.62ರಷ್ಟು ಆಗುತ್ತದೆ.

ಆರ್ಥಿಕ ಸುಧಾರಣೆ ಬಗ್ಗೆ ತೆಗೆದುಕೊಳ್ಳಲಾಗುವ ಕ್ರಮಗಳ ಬಗ್ಗೆ ಹಾಗೂ ಮುಂದಿನ 5 ವರ್ಷಗಳಲ್ಲಿ ಆದಾಯದ ಕೊರತೆ ಹಾಗೂ ಆರ್ಥಿಕ ಕೊರತೆಯನ್ನು ಕಡಿಮೆ ಮಾಡುವ ಗುರಿಯೊಂದಿಗೆ ತಯಾರು ಮಾಡಲಾಗಿರುವ ಮಧ್ಯಮಾವಧಿಯ ಆರ್ಥಿಕ ಯೋಜನೆಯ (Medium Term Fiscal Plan) ಬಗ್ಗೆ ವಿಶ್ವ ಬ್ಯಾಂಕ್ ಅಧ್ಯಕ್ಷರಿಗೆ ವಿವರಿಸಿದ್ದೇನೆ. ತನ್ನ ಆರ್ಥಿಕ ನೆರವನ್ನು ಬರಿಯ ಧನ ಸಹಾಯದ ಮೂಲವೆಂದು ಪರಿಗಣಿಸದೆ, ತಾಂತ್ರಿಕ ನೈಪುಣ್ಯತೆ, ಸಾಮರ್ಥ್ಯಾಭಿವೃದ್ಧಿ ಮತ್ತು ಕೌಶಲ್ಯಾಭಿವೃದ್ಧಿಗೂ ವಿಶ್ವಬ್ಯಾಂಕ್ ಬೆಂಬಲ ನೀಡಬೇಕೆಂದು ನಾನು ವಿನಂತಿಸಿದ್ದೇನೆ.

ಶ್ರೀ ವುಲ್ಫೆನ್‌ಸನ್ ಅವರನ್ನು 1500 ಮಿಲಿಯನ್ ಡಾಲರ್ ಮೌಲ್ಯದ ಆರ್ಥಿಕ ಪುನರ್‌ರಚನೆಯ ಯೋಜನೆ, 330 ಮಿಲಿಯನ್ ಡಾಲರ್‌ನ ಪಶುಪಾಲನಾ ಅಭಿವೃದ್ಧಿ ಯೋಜನೆ, 310 ಮಿಲಿಯನ್ ಡಾಲರ್‌ನ ಗ್ರಾಮೀಣ ನೀರು ಸರಬರಾಜು ಹಾಗೂ ಒಳಚರಂಡಿ ಹಂತ-11 ಯೋಜನೆ, 160 ಮಿಲಿಯನ್ ಡಾಲರ್‌ನ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿ ಯೋಜನೆ, 160 ಮಿಲಿಯನ್ ಡಾಲರ್‌ನ ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆ,

170 ಮಿಲಿಯನ್ ಡಾಲರ್‌ನ ನಗರ ಮತ್ತು ನೀರು ನಿರ್ವಹಣಾ ಯೋಜನೆ- ಈ ಆರು ಯೋಜನೆಗಳ ಪ್ರಸ್ತಾವನೆಗಳನ್ನು ಜೂನ್ 2001ರ ಒಳಗಾಗಿ ಒಪ್ಪಲು ಕೋರಲಾಯಿತು.

ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ಪೌಷ್ಟಿಕ ಆಹಾರ, ಶಿಕ್ಷಣ, ಗ್ರಾಮೀಣ ಕುಡಿಯುವ ನೀರು ಪೂರೈಕೆಗಾಗಿ ಯೋಜನಾ ನೆರವು, ನಗರ ಸಭೆಗಳ ಕ್ಷಮತೆ ಅಭಿವೃದ್ಧಿಗಾಗಿ, ಅಂತರ್ಜಲ ಅಭಿವೃದ್ಧಿಯನ್ನು ಒಳಗೊಂಡಂತೆ ಜಲ ಸಂಪನ್ಮೂಲಗಳ ಸಂರಕ್ಷಣೆಗಾಗಿ, ರೇಷ್ಮೆ ಹಾಗೂ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಗಾಗಿ ರಾಜ್ಯ ಸಲ್ಲಿಸಿರುವ ಯೋಜನಾ ಪ್ರಸ್ತಾವನೆಗಳನ್ನು ತುರ್ತಾಗಿ ಪರಿಶೀಲಿಸುವಂತೆಯೂ ವಿಶ್ವಬ್ಯಾಂಕ್ ಅಧ್ಯಕ್ಷರಲ್ಲಿ ಮನವಿ ಮಾಡಲಾಯಿತು.

3. ಅಭಿವೃದ್ಧಿಯೆಡೆಗೆ ಸಮಗ್ರ ಹಾಗೂ ವಾಸ್ತವವಾದಿ ಹೆಜ್ಜೆಯಿಟ್ಟಿರುವ ರಾಜ್ಯ ಸರ್ಕಾರವನ್ನು ಪ್ರಶಂಸಿಸಿದ ಶ್ರೀ ವುಲ್ಫೆನ್‌ಸನ್ ಅವರು ಅಭಿವೃದ್ಧಿ ಪ್ರಕ್ರಿಯೆಯನ್ನು ಸಾಮುದಾಯಿಕವಾಗಿಸುವ ರಾಜ್ಯ ಸರ್ಕಾರದ ಯತ್ನವನ್ನು ಶ್ಲಾಘಿಸಿದರು. ಕರ್ನಾಟಕವನ್ನು ಮೂಲ ಲಕ್ಷ್ಯವಾಗಿರಿಸಿಕೊಂಡು ಈ ರಾಜ್ಯದೊಂದಿಗೆ ದೀರ್ಘಾವಧಿ ಪಾಲುದಾರಿಕೆ ಹೊಂದಲು ಹರ್ಷವೆನಿಸುತ್ತದೆ ಎಂದ ಅವರು. ಕರ್ನಾಟಕವು ಇತರ ರಾಜ್ಯಗಳಿಗೆ ಮಾದರಿಯಾಗುವ ಎಲ್ಲಾ ಅವಕಾಶಗಳನ್ನು ಹೊಂದಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ವಿಶ್ವಬ್ಯಾಂಕ್ ನೆರವಿನ ಮುಕ್ತಾಂತರ ಕೈಗೊಂಡಿರುವ ಎಲ್ಲಾ ಯೋಜನೆಗಳ ಮೂಲಕ ಸಮಗ್ರ ಅಭಿವೃದ್ಧಿಯನ್ನು ಸಾಧಿಸಲು ನೆರವಾಗುವಂತೆ ಕರ್ನಾಟಕಕ್ಕೆ ಬರುವ ವರ್ಷಗಳಲ್ಲಿ 12 ಸಾವಿರ ಕೋಟಿ ರೂಗಳ (2.6 ಬಿಲಿಯನ್ ಡಾಲರ್) ನೆರವು ನೀಡುವ ಆಶ್ವಾಸನೆಯನ್ನು ಅವರು ಈ ಸಂದರ್ಭದಲ್ಲಿ ನೀಡಿದರು.

4. ಸಮುದಾಯದ ಬಡತನವನ್ನು ನಿವಾರಿಸುವಲ್ಲಿ, ಕುಡಿಯುವ ನೀರು ಪೂರೈಕೆ, ನೀರಾವರಿ ಕೆರೆಗಳ ಅಭಿವೃದ್ಧಿ ಮತ್ತು ಜಲಾನಯನ ಪ್ರದೇಶಾಭಿವೃದ್ಧಿಗಳನ್ನೊಳಗೊಂಡಂತೆ ರಾಜ್ಯ ಸರ್ಕಾರವು ಕೈಗೊಂಡಿರುವ ಅನೇಕ ಯೋಜನೆಗಳಿಗೆ ವಿಶ್ವಬ್ಯಾಂಕ್ ಬೆಂಬಲ ನೀಡಲಿದೆಯೆಂದು ತಿಳಿಸಿದ ವುಲ್ಫೆನ್ಸನ್ ಅವರು ಹದ್ದಾರಿ ಅಭಿವೃದ್ಧಿ, ನಗರಗಳಲ್ಲಿ ಕುಡಿಯುವ ನೀರು ಪೂರೈಕೆ ಯೋಜನೆಗಳಿಗೂ ಬ್ಯಾಂಕ್ ಧನ ಸಹಾಯ ಒದಗಿಸಲಿದ್ದು ಆರ್ಥಿಕ, ಆಡಳಿತ ಮತ್ತು ವಿದ್ಯುತ್ ಕ್ಷೇತ್ರಗಳ ಸುಧಾರಣೆಗೂ ಸಹಾ ಯೋಜನಾ ನೆರವನ್ನು ನೀಡಲಿದೆ ಎಂದರು.

5. ಒಳ್ಳೆಯ ಆಡಳಿತ, ಆರ್ಥಿಕ ವಿಚಕ್ಷಣೆ ಹಾಗೂ ಸಾಮಾಜಿಕ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಗಮನ ಹರಿಸುವುದು ಬಡತನದ ವಿರುದ್ಧ ಹೋರಾಟದ ನಿಟ್ಟಿನಲ್ಲಿ, ಅತ್ಯಂತ ಪರಿಣಾಮಕಾರಿಯೆಂಬ ನನ್ನ ಅಭಿಪ್ರಾಯಕ್ಕೆ ವಿಶ್ವಬ್ಯಾಂಕ್ ಅಧ್ಯಕ್ಷರು ಸಹಮತ ವ್ಯಕ್ತಪಡಿಸಿದರು.

6. ನನ್ನನ್ನು ಭೇಟಿಯಾಗುವ ಮುನ್ನ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಹಳ್ಳಿಕೇರಿ ಮತ್ತು ಪಾಪನಾಯಕನಹಳ್ಳಿಗಳಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕೈಗೊಳ್ಳಲಾಗಿರುವ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಪ್ರದೇಶಗಳಿಗೆ ಭೇಟಿ ನೀಡಿದ ಶ್ರೀ ವುಲ್ಫೆನ್‌ಸನ್ ಅವರು ಅಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಗೂ ಗ್ರಾಮದ ಶಿಕ್ಷಣ ಸಮಿತಿಯ ಸದಸ್ಯರುಗಳೊಂದಿಗೆ ಸಮಾಲೋಚಿಸಿ ಪ್ರಾಥಮಿಕ ಶಿಕ್ಷಣದಲ್ಲಿ ಸಮುದಾಯದ ಆಸಕ್ತಿಯನ್ನು ಮೆಚ್ಚಿಕೊಂಡರು.

7. ವಿಶ್ವಬ್ಯಾಂಕ್ ನೆರವಿನಿಂದ ಹಂಪಿ ಮತ್ತು ಮಲಪನಗುಡಿಗಳಲ್ಲಿ ಕೈಗೆತ್ತಿಕೊಳ್ಳಲಾಗಿರುವ ಗ್ರಾಮೀಣ ನೀರು ಪೂರೈಕೆ ಹಾಗೂ ಒಳಚರಂಡಿ ಯೋಜನಾ ಪ್ರದೇಶಗಳಿಗೆ ಭೇಟಿ ನೀಡಿದ ವಿಶ್ವಬ್ಯಾಂಕ್ ಅಧ್ಯಕ್ಷರು ಅಲ್ಲಿನ ಗ್ರಾಮೀಣ ನೀರು ಪೂರೈಕೆ ಸಮಿತಿಯ ಸದಸ್ಯರನ್ನು ಭೇಟಿಯಾದರು. ಈ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ, ಮತ್ತು ನಿರ್ವಹಣೆಯಲ್ಲಿ ಗ್ರಾಮಸ್ಥರ ಸಕ್ರಿಯ ಪಾಲ್ಗೊಳ್ಳುವಿಕೆ ಹಾಗೂ ಸರ್ಕಾರ ಮತ್ತು ಸಮುದಾಯದ ನಡುವೆ ಇರುವ ಹಾರ್ದಿಕ ಸಮನ್ವಯವನ್ನು ಅವರು ಪ್ರಶಂಸಿಸಿದರು. ಅನಂತರ ಪಾಪಿನಾಯಕನಹಳ್ಳಿಯಲ್ಲಿರುವ ಅಂಗನವಾಡಿ ಕೇಂದ್ರವೊಂದಕ್ಕೆ ಭೇಟಿ ನೀಡಿದ ಅಧ್ಯಕ್ಷರು ಸಮಗ್ರ ಮಕ್ಕಳ ಅಭಿವೃದ್ಧಿಯಲ್ಲಿ ರಾಜ್ಯ ಸರ್ಕಾರದ ಆಸ್ಥೆಯನ್ನು ಮತ್ತು ಅದರ ಪ್ರಯತ್ನಗಳನ್ನು ಶ್ಲಾಘಿಸಿದರು.

8. ಹಂಪಿಯ ವಿಶ್ವಪರಂಪರೆ ಪಟ್ಟಿಗೆ ಸೇರಿದ ಪ್ರದೇಶಗಳನ್ನು ಸಂದರ್ಶಿಸಿದ ಅಧ್ಯಕ್ಷರು ಈ ಪ್ರದೇಶಗಳು ನಿಜಕ್ಕೂ ಜಾಗತಿಕ ಮೌಲ್ಯವುಳ್ಳದ್ದು ಎಂದು ಅಭಿಪ್ರಾಯ ಪಟ್ಟರು. ರಾಜ್ಯಕ್ಕೆ ಭೇಟಿ ನೀಡಿದ 3 ದಿನಗಳ ಅವಧಿಯಲ್ಲಿ ಅವರು "ಬಡತನ ಕಡಿಮೆ ಮಾಡುವಲ್ಲಿ ಮಾಹಿತಿ ತಂತ್ರಜ್ಞಾನದ ಪಾತ್ರ" ಎಂಬ ಕಾರ್ಯಾಗಾರದಲ್ಲಿ ಪಾಲ್ಗೊಡಿದ್ದರು. ಬಡತನ ನಿವಾರಣೆಗಾಗಿ ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳಲಿರುವ ಪ್ರಯತ್ನದಲ್ಲಿ ಕರ್ನಾಟಕವೊಂದು ಮುಂಚೂಣಿ ರಾಜ್ಯವಾಗುವ ಅರ್ಹತೆ ಪಡೆದಿದೆ ಎಂದು ಅವರು ಮುಕ್ತಕಂಠದಿಂದ ಶ್ಲಾಘಿಸಿದರು.

9. ರಾಜ್ಯ ಸರ್ಕಾರ ಮತ್ತು ವಿಶ್ವಬ್ಯಾಂಕ್ ನಡುವಣ ಸಂಬಂಧವನ್ನು ಮತ್ತಷ್ಟು ಬಲಗೊಳಿಸಿದ ಶ್ರೀ ವುಲ್ಫೆನ್‌ಸನ್‌ರ ರಾಜ್ಯದ ಭೇಟಿ, ಬಡತನ ನಿವಾರಣೆಯನ್ನು ಪರಮಗುರಿಯಾಗಿಸಿಕೊಂಡ ರಾಜ್ಯ ಸರ್ಕಾರ ತನ್ನ ಈ ಯೋಜನೆಗಳಿಗೆ ವಿಶ್ವಬ್ಯಾಂಕ್‌ನ ಬೃಹತ್ ಮಟ್ಟದ ನೆರವನ್ನು ಪಡೆಯುವಲ್ಲಿ ಸಹಕಾರಿಯಾಗಿದೆ.

... ...

ರಾಜ್ಯ ವಲಯದಲ್ಲಿ ಕರ್ನಾಟಕ ವಿಶ್ವ ಬ್ಯಾಂಕ್‌ನಿಂದ ಈವರೆಗೆ ಪಡೆದುಕೊಂಡ ಆರ್ಥಿಕ ಬೆಂಬಲದ ವಿವರ

ಹಣ ಕೋಟಿ ರೂ.ಗಳಲ್ಲಿ

ವರ್ಷ	ರಾಜ್ಯ ವಲಯದಲ್ಲಿ EAPಯಡಿ ಪಡೆದ ಮೊತ್ತ	ರಾಜ್ಯ ವಲಯದಲ್ಲಿ ವಿಶ್ವ ಬ್ಯಾಂಕ್ ಯೋಜನೆಗಳಿಗೆ ಪಡೆದುಕೊಂಡ ಮೊತ್ತ
1991-92	257.00	ಲಭ್ಯವಿಲ್ಲ
1992-93	242.15	ಲಭ್ಯವಿಲ್ಲ
1993-94	263.65	ಲಭ್ಯವಿಲ್ಲ
1994-95	259.61	ಲಭ್ಯವಿಲ್ಲ
1995-96	126.37	ಲಭ್ಯವಿಲ್ಲ
1996-97	190.27	ಲಭ್ಯವಿಲ್ಲ
1997-98	173.10	ಲಭ್ಯವಿಲ್ಲ
1998-99	301.61	93.96
1999-00	460.65	167.78
2000-2005	ವಿಶ್ವ ಬ್ಯಾಂಕ್ ಭರವಸೆ ಇತ್ತಂತೆ	12000 ಕೋಟಿ ರೂ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಹಾಗೂ ಸರ್ಕಾರದ ಈ ಪ್ರಯತ್ನವನ್ನು ನಾವು ಸ್ವಾಗತಿಸುತ್ತೇವೆ. ವಿಶ್ವಬ್ಯಾಂಕ್‌ನಿಂದ ಸುಮಾರು 12 ಸಾವಿರ ಕೋಟಿ ರೂಪಾಯಿ ಸಾಲ ತರುವಂಥ ಈ ಪ್ರಯತ್ನ ಮೆಚ್ಚತಕ್ಕಂಥದ್ದು. ಅದರಲ್ಲೂ ಗ್ರಾಮೀಣ ಅಭಿವೃದ್ಧಿಗಾಗಿ ಹೆಚ್ಚಿನ ಮಹತ್ವ ಕೊಟ್ಟಿರುವುದು ಸ್ವಾಗತಾರ್ಹವಾದ ವಿಚಾರ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಎರಡು ವಿಚಾರಗಳಲ್ಲಿ ಸ್ಪಷ್ಟನೆ ಕೇಳಬಯಸುತ್ತೇನೆ. ಮೊದಲನೆಯದಾಗಿ, 12 ಸಾವಿರ ಕೋಟಿ ರೂಪಾಯಿ ಸಾಲ ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕಿದೆಯೇ? ಏಕೆಂದರೆ, ನಾವು ಯಾವುದೇ ಆಕ್ಸಿಲರೇಟೆಡ್ ಪ್ರಾಜೆಕ್ಟ್‌ಗಳಿಗೆ ಸಾಲ ತೆಗೆದುಕೊಳ್ಳಬೇಕಾದರೆ, ಕೇಂದ್ರ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಯೋಜನಾ ಆಯೋಗದ ಒಪ್ಪಿಗೆ ತೆಗೆದುಕೊಳ್ಳಬೇಕಾಗುತ್ತದೆ. ಇದರ ಒಪ್ಪಿಗೆ ಸಿಕ್ಕಿದೆಯೇ? ಎರಡನೆಯದಾಗಿ, ಈಗಾಗಲೇ ಆನ್ ಗೋಯಿಂಗ್ ಪ್ರಾಜೆಕ್ಟ್ ಏನಿದೆ, ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಮಾನ್ಯ

ಮುಖ್ಯಮಂತ್ರಿಗಳ ಹೇಳಿಕೆಯಲ್ಲಿಯೇ 1991ರಿಂದ 1997ರವರೆಗೆ ಲಭ್ಯವಿಲ್ಲವೆಂದು ಹೇಳಿರುತ್ತಾರೆ. ಈ ಮೊದಲು ಪರ್ಸೆಂಟೇಜ್ ಆಗಿ ಯು.ಕೆ.ಪಿ.ಗೆ ಎಷ್ಟು ಹಣ ಕೊಡುತ್ತಿದ್ದರು ಅದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರು. ಪುನಃ ಅದು ಪ್ರಾರಂಭವಾಯಿತು. ಹೀಗಾಗಿ ಆನ್ ಗೋಯಿಂಗ್ ಸ್ಕೀಮ್‌ನಲ್ಲಿ ದುಡ್ಡುಗಳು ಮುಂದುವರಿಯುತ್ತವೆಯೇ? ಮುಗಿದಿವೆಯೇ? ಈ ಎರಡರ ಬಗ್ಗೆ ನಾನು ಸ್ಪಷ್ಟನೆ ಕೇಳಬಯಸುತ್ತೇನೆ. ನಾನು ಮೇಲೆ ಕೇಳಿದ ಮೊದಲನೇಯ ಪ್ರಶ್ನೆಗೆ ಒಪ್ಪಿಗೆಯ ಭರವಸೆ ಏನಾದರೂ ಸಿಕ್ಕಿದೆಯೇ? ಆನ್ ಗೋಯಿಂಗ್ ಸ್ಕೀಮ್‌ನಲ್ಲಿ ವಿಶ್ವಬ್ಯಾಂಕ್‌ನಿಂದ ಯು.ಕೆ.ಪಿ.ಗೆ ಬರುತ್ತಿದ್ದ ದುಡ್ಡನ್ನು ಮೊದಲು ನಿಲ್ಲಿಸಿಬಿಟ್ಟಿದ್ದರು, ಏಕೆಂದರೆ ಕ್ವಾಲಿಟಿ ಆಫ್ ವರ್ಕ್ ಹಾಗೂ ಅವರ ಒಂದು ಗುಣಮಟ್ಟವನ್ನು ಮುಟ್ಟಿರಲಿಲ್ಲವೆಂದು ಆಗ ವಿಶ್ವಬ್ಯಾಂಕಿನವರು ದುಡ್ಡನ್ನು ನಿಲ್ಲಿಸಿಬಿಟ್ಟಿದ್ದರು.

ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ಇದರಲ್ಲಿ 12 ಸಾವಿರ ಕೋಟಿ ನೆರವು ಎಂದು ತಿಳಿಸಿರುತ್ತಾರೆ, ಆದ್ದರಿಂದ, ಇದರಲ್ಲಿ ಸಾಲ ಎಷ್ಟು? ನೆರವು ಎಷ್ಟು? ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಕ್ಲಿಯರ್ ಮಾಡಬೇಕು. ಇದರ ಜೊತೆಗೆ ನಿಗದಿತ ಬಡ್ಡಿದರ ಎಷ್ಟು? ಹಾಗೂ ಮರುಪಾವತಿ ಎಷ್ಟು ವರ್ಷಗಳಲ್ಲಿ ಮಾಡುತ್ತೀರಿ? ಎಂಬುದನ್ನು ದಯಮಾಡಿ ತಿಳಿಸಬೇಕು.

+ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಅಧ್ಯಕ್ಷರೆ, 12 ಸಾವಿರ ಕೋಟಿ ರೂಪಾಯಿ ನೆರವು ರಾಜ್ಯಕ್ಕೆ ಬರುತ್ತಿದೆ, ಈ ವಿಚಾರದಲ್ಲಿ ಬಡತನ ನಿರ್ಮೂಲನೆಯ ಬಗ್ಗೆ ಹಾಗೂ ಗ್ರಾಮೀಣಾಭಿವೃದ್ಧಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಾಳಜಿ ವಹಿಸಿ ಸಾಲವನ್ನು ಪಡೆಯುತ್ತಿದ್ದಾರೆ ಇದಕ್ಕೆ ವಿಶ್ವಬ್ಯಾಂಕ್‌ನವರೂ ಕೊಡುವುದಕ್ಕೂ ಒಪ್ಪಿದ್ದಾರೆ. ಆದರೆ ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಗಮನದಲ್ಲಿರಿಸಬೇಕೆಂದು ಕೋರುತ್ತೇನೆ. ತೆಗೆದುಕೊಂಡಿರತಕ್ಕಂಥ ಸಾಲ ಹಾಗೂ ಖರ್ಚು ಮಾಡತಕ್ಕಂಥ ಹಣ ಸದ್ವಿನಿಯೋಗ ಆಗುತ್ತದೆಯೇ ಅಥವಾ ಇಲ್ಲವೆ ಎನ್ನುವ ಮಾಹಿತಿ ಮಾನ್ಯ ಮುಖ್ಯಮಂತ್ರಿಗಳಿಗೆ ಬರುತ್ತಿಲ್ಲವೆಂದು ನನಗೆ ಅನ್ನಿಸುತ್ತದೆ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ನಾನು ಸದಸ್ಯನಾಗಿದ್ದೇನೆ. ಸದರಿ ಸಮಿತಿಯ ಜೊತೆ ಆಂಧ್ರಪ್ರದೇಶಕ್ಕೆ ಹೋಗಿದ್ದೆವು. ಇಲ್ಲಿ ಆಗತಕ್ಕಂಥ ಪ್ರತಿಯೊಂದು ಕೆಲಸಗಳನ್ನು ಪರಿಶೀಲನೆ ಮಾಡುವುದಕ್ಕೋಸ್ಕರ ಒಬ್ಬ ನುರಿತ, ಸಚ್ಚಾರಿತ್ರ್ಯ ಮತ್ತು ನಿಷ್ಠೆ ಪ್ರಾಮಾಣಿಕತೆ ಹೊಂದಿದಂಥ ನಿವೃತ್ತ ಅಧಿಕಾರಿಯನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಆ ಕೆಲಸಕ್ಕಾಗಿ ನಿಯೋಜಿಸಿದ್ದಾರೆ. ಎಲ್ಲಾದರು ಒಂದು ಕಡೆ ಕೆಲಸ ಮಾಡುವಾಗ ಗೊತ್ತಿಲ್ಲದಂತೆ ನಿಯೋಜನೆ ಮಾಡಿರತಕ್ಕಂಥ ಅಧಿಕಾರಿಗಳು ಕೆಲಸವನ್ನು ಪರಿಶೀಲನೆ ಮಾಡಿ ಸಂಜೆಯೊಳಗೆ ಮಾನ್ಯ ಮುಖ್ಯಮಂತ್ರಿಯವರಿಗೆ ವರದಿಯನ್ನು ಕೊಡುತ್ತಾರೆ. ಒಂದು ವೇಳೆ ಕೆಲಸ ಸರಿಯಾಗಿ ಇಲ್ಲದಿದ್ದರೆ ಇದಕ್ಕೆ ಸಂಬಂಧಪಟ್ಟ

ಅಧಿಕಾರಿಯ ಮೇಲೆ ಯಾವುದೇ ದಯಾದಾಕ್ಷಿಣ್ಯಕ್ಕೆ ಮತ್ತು ಒತ್ತಾಯಕ್ಕೆ ಈಲ್ಡ್ ಆಗದೇ ತಕ್ಷಣ ಕ್ರಮ ತೆಗೆದುಕೊಳ್ಳುವಂಥ ಪ್ರಯತ್ನವನ್ನು ಮಾಡುವುದರಿಂದ, ಅಲ್ಲಿ ಒಳ್ಳೆಯ ಕೆಲಸ ಆಗುತ್ತದೆ ಎಂಬುದನ್ನು ನಾವು ಕೇಳಿದ್ದೇವೆ. ಆದ್ದರಿಂದ ಇಂಥ ಒಂದು ವ್ಯವಸ್ಥೆಯನ್ನು ಇಲ್ಲಿಯೂ ಕೂಡ ತರಬೇಕೆಂದು ನಿನಂತಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಯಾವುದೇ ರೀತಿಯ ಕಂಟ್ರೋಲ್ ತರದೆ ಇದ್ದರೆ, ಬಂದಂಥ ಹಣ ಯಾರೋ ಜೇಬಿಗೆ ಸೇರಿ ಹೋಗುತ್ತದೆ. ಬಡಪಾಯಿ ರೈತರಿಗೆ ಏನು ಪ್ರಯೋಜನವಾಗುವುದಿಲ್ಲ. ನಿಮ್ಮ ಶ್ರಮ ಸಾರ್ಥಕವಾಗಬೇಕಾದರೆ ಬೇರೆ ಕಡೆಯಿಂದ ತಂದಂಥ ಹಣ ೧೦೦ಕ್ಕೆ ೧೦೦ರಷ್ಟು ಉಪಯೋಗವಾಗದೆ ಇದ್ದರೂ ಸಹ ಕನಿಷ್ಟಪಕ್ಷ ೯೦ ಭಾಗದಷ್ಟಾದರೂ ಸದ್ವಿನಿಯೋಗ ಆಗುತ್ತದೆಯೆ ಎಂಬುದನ್ನು ಪರಿಶೀಲನೆ ಮಾಡತಕ್ಕಂಥ ವ್ಯವಸ್ಥೆಯನ್ನು ತಾವು ಇಟ್ಟುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕುಡಿಯುವ ನೀರಿನ ಯೋಜನೆಗೋಸ್ಕರ ಸುಮಾರು ೩೦೦ ಕೋಟಿ ರೂಪಾಯಿಗಳನ್ನು ಸಾಲ ತಂದಿದ್ದೀರಿ. ಕುಡಿಯುವ ನೀರಿನ ಯೋಜನೆಯಲ್ಲಿ ಆಗಿರತಕ್ಕಂಥ ಕೆಲಸಗಳಲ್ಲಿ ಸಾಕಷ್ಟು ಕಳಪೆ ದರ್ಜೆಯ ಕಾಮಗಾರಿ ಕೆಲಸಗಳು ಆಗಿವೆ ಎಂದು ಅನೇಕ ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಕುಡಿಯುವ ನೀರಿಗಾಗಿ ಅಳವಡಿಸಿರುವ ಪೈಪ್‌ಗಳು ಪ್ರಾರಂಭವಾದ ದಿನವೇ ಒಡೆದು ಹೋಗಿರತಕ್ಕಂಥಾದ್ದು ಸಾಕಷ್ಟು ಇದೆ. ಬೇರೆ ಕಡೆಯಿಂದ ತರುವ ಹಣಕ್ಕೆ ಬಡ್ಡಿ ಸಹಿತ ಪಾವತಿ ಮಾಡುವಾಗ ಹಳ್ಳಿಯ ಜನರಿಗೆ ಇದರಿಂದ ಎಷ್ಟು ಉಪಯೋಗ ಆಗಿದೆ ಎಂಬುದನ್ನು ನಾವು ಗಮನಿಸಬೇಕಾದ ವಿಚಾರವಾಗಿದೆ. ನಾವು ಹೈದ್ರಾಬಾದ್‌ನಿಂದ ಬಸ್‌ನಲ್ಲಿ ರಾತ್ರಿ ಸಮಯ ಬರುತ್ತಿರುವಾಗ ನಾವೆಲ್ಲರೂ ಕೂಡ ಮಲಗಿಕೊಂಡಿದ್ದವು. ಇದ್ದಕ್ಕಿದ್ದಂತೆ ದಢದಢ ಎಂದು ಸೌಂಡ್ ಆಯಿತು. ನಾವು ನಿದ್ದೆಯಿಂದ ಎಚ್ಚೆತ್ತು ನೋಡಿದಾಗ ಕರ್ನಾಟಕಕ್ಕೆ ಬಂದಿದ್ದೇವು. ಇವತ್ತಿನ ದಿವಸ ಆಂಧ್ರಪ್ರದೇಶದ ಎನ್.ಹೆಚ್. ರಸ್ತೆಗೂ ಮತ್ತು ಕರ್ನಾಟಕದಲ್ಲಿರತಕ್ಕಂಥ ಎನ್.ಹೆಚ್. ರಸ್ತೆಗಳು ಎಷ್ಟು ಚೆನ್ನಾಗಿವೆ ಎಂಬುದು ಇದರಿಂದ ಗೊತ್ತಾಗುತ್ತದೆ. ಅಲ್ಲಿ ತುಂಬಾ ಪರ್ಫೆಕ್ಟ್ ಆಗಿ ಟಾರ್ ಹಾಕಿರುತ್ತಾರೆ. ನಿಮ್ಮ ಸರ್ಕಾರ ಬಂದ ಮೇಲೆ ಪಿ.ಡಬ್ಲ್ಯೂ.ಡಿ. ಕೆಲಸಗಳಲ್ಲಿ ಸ್ವಲ್ಪಮಟ್ಟಿಗಾದರು ಸುಧಾರಣೆ ಆಗಿದೆ. ಸರಿಯಾಗಿ ಕೆಲಸ ಆಗಿಲ್ಲ ಎಂದು ಹೇಳುವುದಿಲ್ಲ. ಆದರೆ ನಾವು ನಿರೀಕ್ಷೆ ಮಾಡಿದ ಪ್ರಮಾಣದಲ್ಲಿ ಉತ್ತಮ ದರ್ಜೆಯ ಕೆಲಸ ಆಗುತ್ತಿಲ್ಲ. ಇವತ್ತಿನದಿವಸ ಹೊರಗಡೆಯಿಂದ ಲೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ತಂದು, ಈ ರೀತಿ ಮಾಡಿದರೆ ಹೇಗೆ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಗಮನ ಹರಿಸಬೇಕಾಗುತ್ತದೆ.

ಅಧ್ಯಕ್ಷರು :— ವಿಶ್ವ ಬ್ಯಾಂಕ್ ಕೊಡತಕ್ಕಂಥ ಲೋನ್‌ಗೂ ಪಿ.ಡಬ್ಲ್ಯೂ.ಡಿ. ರಸ್ತೆಗೂ ಏನು ಸಂಬಂಧ ಇದೆ? ನಬಾರ್ಡ್ ರಸ್ತೆಯ ಬಗ್ಗೆ ಚರ್ಚೆ ಮಾಡುವುದಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಆಂಧ್ರಪ್ರದೇಶದಲ್ಲಿರುವಂಥ ವ್ಯವಸ್ಥೆಯನ್ನು ಇಲ್ಲಿ ಮಾಡಿಕೊಂಡು ಒಳ್ಳೆಯ ಗುಣಮಟ್ಟದ ಕೆಲಸವನ್ನು ಮಾಡಿಸಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಮ್ಮಿನ ದಿಮಸ ಒಳ್ಳೆಯ ಕೆಲಸವನ್ನು ಮಾಡಿದರೆ ಜನರು ಸಹ ಮೆಚ್ಚಿ ಸರ್ಕಾರಕ್ಕೆ ಕೊಡಬೇಕಾದದ್ದನ್ನು ಖಂಡಿತ ಕೊಡುವುದಕ್ಕೆ ಇಷ್ಟಪಡುತ್ತಾರೆ. ಆದ್ದರಿಂದ, ದೇವರು ಮತ್ತು ನಿಮ್ಮ ಆತ್ಮ ಮೆಚ್ಚುವಂಥ ಉತ್ತಮವಾದ ಕೆಲಸವನ್ನು ಮಾಡಿದರೆ ನೀವು ಕೀರ್ತಿ ಶಾಲಿಗಳಾಗುತ್ತೀರಿ. ಇಲ್ಲವಿದ್ದರೆ, ಬೇರೆ ಯಾರೋ ಸ್ವಾಮಿಗಳು ಮಾಡಿರುವಂಥ ಕೆಲಸವನ್ನು ಎಲ್ಲಿ ಕೇಳಿದರೂ ಸಹ ಶಾಪ ಹಾಕುತ್ತಿದ್ದಾರೆ. ಅವನ ಮನೆ ಹಾಳಾಗಿ ಹೋಗ, ಮತ್ತೆ ಬರುತ್ತಾನೆಯೇ ಎಂದು ಬೈದು ಕೊಳ್ಳುತ್ತಾರೆ. ಈ ರೀತಿಯಾದ ಅಪವಾದವನ್ನು ತಾವು ಹೊತ್ತುಕೊಳ್ಳಬೇಡಿ. ನೀವು ಬಂದ ಮೇಲೆ ಒಳ್ಳೆಯ ಮಳೆ-ಬೆಳೆ ಆಗಿದೆ. ಹಾಗೆಯೇ ಎಲ್ಲಿ ನೋಡಿದರು ಸಹ ಸುಭಿಕ್ಷೆಯಿಂದ ಇದೆ ಮತ್ತು ಎಲ್ಲಾ ಕೆರೆಗಳು ತುಂಬಿವೆ ಹಾಗೆಯೇ ಪಕ್ಷಿಗಳು ಕೂಡ ಚೆನ್ನಾಗಿ ಇವೆ. ಸಂಜೆ ಸಮಯದಲ್ಲಿ ದನಕರುಗಳು ಹೊಟ್ಟೆ ತುಂಬಾ ಮೇವನ್ನು ತಿಂದು ಬರುವುದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ನಾನು ರೈತನ ಮಗನಾಗಿರುವುದರಿಂದ ಈ ಎಲ್ಲಾ ವಿಷಯಗಳನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು :— ಹಕ್ಕಿಗಳು ಸಂತೋಷವಾಗಿರುವುದು ನಿಮಗೆ ಹೇಗೆ ಗೊತ್ತು?

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಸತ್ಯವಾಗಿ ಇರುವಂಥ ವಿಚಾರವನ್ನು ನಾನು ಹೇಳುತ್ತಿದ್ದೇನಷ್ಟೆ. ಮಾನ್ಯ ಮುಖ್ಯಮಂತ್ರಿಯವರ ಮೇಲೆ ಮತ್ತು ಎಲ್ಲಾ ಮಂತ್ರಿಯವರ ಮೇಲೆ ದೇವರಿಗೆ ಒಳ್ಳೆಯ ಕರುಣೆ ಇದೆ. ಎಂದು ಕಾಣುತ್ತದೆ. ಆದ್ದರಿಂದ ಇದನ್ನು ಸದ್ಬಿನಿಯೋಗಪಡಿಸಿಕೊಂಡು ಕೀರ್ತಿ ಶಾಲಿಗಳಾಗಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈಗಾಗಲೇ ಹೇಳಿದ ವ್ಯವಸ್ಥೆಯನ್ನು ತಕ್ಷಣ ನಮ್ಮ ರಾಜ್ಯದಲ್ಲಿಯೂ ಕೂಡ ಜಾರಿಗೆ ತಂದು ಖರ್ಚು ಮಾಡುತ್ತಿರುವ ಹಣ ನ್ಯಾಯವಾಗಿ ಖರ್ಚು ಆಗುತ್ತಿದೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡಿ, ಒಂದಿಬ್ಬರ ಮೇಲೆ ಕ್ರಮ ತೆಗೆದುಕೊಂಡರೆ ಮುಂದೆ ಎಲ್ಲ ಕೆಲಸ ಸರಿಯಾಗಿ ಆಗುತ್ತದೆ. ಇಲ್ಲದಿದ್ದರೆ ಒಂದು ಕೆಲಸಕ್ಕೆ ಕೇವಲ ೩೦ರಿಂದ ೪೦ ಪರ್ಸೆಂಟ್ ಮಾತ್ರ ಖರ್ಚು ಆಗುತ್ತದೆ. ಉಳಿದ ಹಣ ಯಾರ್ಯಾರೋ ಜೇಬಿಗೆ ಹೋಗುತ್ತದೆ. ಇದಕ್ಕೆ ಅವಕಾಶ ಕೊಡುವುದಕ್ಕೆ ಹೋಗಬೇಡಿ. ಮಾನ್ಯ ಅಧ್ಯಕ್ಷರು ಹಕ್ಕಿಯ ಪ್ರಶ್ನೆ ಬಂದಾಗ ಸ್ವಲ್ಪ ತಾಳ್ಮೆಯಿಂದ ಇರಬೇಕು. ಏಕೆಂದರೆ ನಾವು ಸಹ ಹಕ್ಕಿಯಿಂದ ಬಂದವರು. ಈಗೇನೋ ಅಧ್ಯಕ್ಷ ಸ್ಥಾನದಲ್ಲಿ ಇದ್ದೀರಿ. ಇದು ಮುಗಿದು ಹೋದ ಮೇಲೆ ನೀವು ನಿಮ್ಮ ಹಳ್ಳಿಗೆ ಹೋದರೆ ನೀವು ಏನು ಕೆಲಸ ಮಾಡಿದ್ದೀರಿ ಎಂದು ಜನ ಕೇಳುತ್ತಾರೆ. ನಮಗೂ ಸಹ ಈ ರೀತಿಯಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ರೈತರ ವಿಷಯ ಬಂದಾಗ ತಾವು ಸ್ವಲ್ಪ ತಾಳ್ಮೆಯಿಂದ ಇರಬೇಕು.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹನುಮೇಗೌಡರು ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದರು. ಇವತ್ತಿನ ದಿವಸ ಹಾಸನ ತಾಲ್ಲೂಕು ಮತ್ತು ಹಾಸನ ನಗರದಲ್ಲಿ ಹಲವಾರು ಕೋಟಿ ರೂಪಾಯಿಗಳಷ್ಟು ಕಾಮಗಾರಿ ಕೆಲಸಗಳು ನಡೆದಿವೆ. ಇದು ಹೇಗೆ ನಡೆದಿದೆ? ಇದನ್ನು ಯಾರು ನಡೆಸಿದರು? ಅದರ ಜೊತೆಗೆ ಇದು ಕೂಡ ತನಿಖೆ ಮಾಡಿಸಿ. ಏಕೆಂದರೆ ಎರಡು-ಮೂರು ತಿಂಗಳ ಹಿಂದೆ ಮಾಡಿದಂಥ ಕೆಲಸ ಮತ್ತೆ ಆಗುತ್ತಿದೆ. ನಾವು ಹೋಗಿ ಇದನ್ನು ನೋಡಬಹುದು. ಇದನ್ನು ಯಾರೂ ಕೂಡ ನಂಬುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರ ಕ್ಷೇತ್ರದಲ್ಲಿ ಆಗಿರತಕ್ಕಂಥ ಕೆಲಸವನ್ನು ದಯವಿಟ್ಟು ಪರಿಶೀಲನೆ ಮಾಡಿದರೆ ನ್ಯಾಯ, ಅನ್ಯಾಯ ಮತ್ತು ಸತ್ಯ, ಅಸತ್ಯ ಹಾಗೆಯೇ ಅವರು ಹೇಳುವುದೆಲ್ಲಾ ಗೊತ್ತಾಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಸರಿಯಾಗಿ ಕೆಲಸ ಆಗಿಲ್ಲ. ಇದರ ಬಗ್ಗೆ ನಾನು ಈಗಾಗಲೇ ಸಂಬಂಧಪಟ್ಟವರಿಗೆ ದೂರನ್ನು ಕೊಟ್ಟಿದ್ದೇನೆ. ಇವತ್ತಿನದಿವಸ ಸಕಲೇಶಪುರದಲ್ಲಿ ಎಲ್ಲ ಕೆಲಸವೂ ಸಹ ಪರ್ಫೆಕ್ಟ್ ಆಗಿ ಆಗಿದೆಯೆ ಎಂಬುದನ್ನು ಮಾನ್ಯ ಸದಸ್ಯರು ಈ ಸದನಕ್ಕೆ ತಿಳಿಸಬೇಕು. ಈಗಾಗಲೇ ನಮ್ಮಲ್ಲಿ ಆಗಿರತಕ್ಕಂಥ ಕೆಲಸದ ಬಗ್ಗೆ ದೂರು ಕೊಟ್ಟಿದ್ದು, ಇದರ ಬಗ್ಗೆ ಈಗ ಪರಿಶೀಲನೆ ನಡೆಯುತ್ತಿದೆ. ಇಲ್ಲಿ ಯಾರ ದಯಾದಾಕ್ಷಿಣ್ಯ ಇಟ್ಟುಕೊಳ್ಳದೆ ನಾನು ಹೋರಾಟ ಮಾಡುತ್ತಿದ್ದೇನೆ. ನಾನೇನು ರೂಲಿಂಗ್ ಪಾರ್ಟಿ ಮೆಂಬರ್ ಆಗಿಲ್ಲ, ಅಥವಾ ಕಾಂಟ್ರ್ಯಾಕ್ಟ್‌ದಾರನಲ್ಲ.

ಅಧ್ಯಕ್ಷರು :— ವಿಶ್ವ ಬ್ಯಾಂಕ್ ನೀಡತಕ್ಕಂಥ ನೆರವಿನ ಬಗ್ಗೆ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಿ.

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್ ಲೋನ್ ಜಾರಿಗೆ ಬರಬೇಕಾದರೆ ಕೇಂದ್ರ ಸರ್ಕಾರದ ಪೂರ್ವ ಅನುಮತಿ ಇಲ್ಲದೆ ಅಥವಾ ಅವರ ಜೊತೆ ಸಮಾಲೋಚನೆ ಮಾಡದೆ ವಿಶ್ವಬ್ಯಾಂಕ್‌ನವರು ರಾಜ್ಯಕ್ಕೆ ಹಣವನ್ನು ಸಾಲದ ರೂಪದಲ್ಲಿ ಅಥವಾ ನೆರವಿನ ರೂಪದಲ್ಲಿ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ನಾನು ಈಗಾಗಲೇ ಎರಡು-ಮೂರು ಬಾರಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಮೂರು ಬೃಹತ್ ಯೋಜನೆಗಳಿಗೆ ಕೇಂದ್ರ ಸರ್ಕಾರದ ಆರ್ಥಿಕ ಸಚಿವಾಲಯ ಈಗಾಗಲೇ ವಿಶ್ವಬ್ಯಾಂಕ್‌ಗೆ ತನ್ನ ಸಮ್ಮತಿಯನ್ನು ಕೊಟ್ಟಿದೆ. ನಾನು ಈಗಾಗಲೇ ಹೇಳಿದ ಮೂರು ಯೋಜನೆಯಲ್ಲಿ ಮೊದಲನೆಯದಾಗಿ ವಿದ್ಯುತ್ ಸುಧಾರಣೆಗಾಗಿ ೬,೫೦೦ ಕೋಟಿ ರೂಪಾಯಿಗಳು ಮತ್ತು ಕೆರೆಗಳ ಶ್ಯಾನರ್ ರಚನೆಗೆ ಮತ್ತು ಅಭಿವೃದ್ಧಿಗಾಗಿ ಸುಮಾರು ೪೦೦ ಕೋಟಿ ರೂಪಾಯಿ ಹಾಗೆಯೇ ರಸ್ತೆಗಳ ಅಭಿವೃದ್ಧಿಗೋಸ್ಕರ ೧,೨೦೦ ಕೋಟಿ ರೂಪಾಯಿ ಹೀಗೆ ಒಟ್ಟು ಮೂರು ಯೋಜನೆಗಳಿವೆ. ಈ ಮೂರು ಯೋಜನೆಗಳನ್ನು

ಫುಲ್ ಟ್ರ್ಯಾಕ್ ಪ್ರಾಜೆಕ್ಟ್‌ಗಳಾಗಿ ಪೂರ್ಣಮಾಡಬೇಕೆಂದು ಕೇಂದ್ರ ಸರ್ಕಾರದವರು ವಿಶ್ವಬ್ಯಾಂಕ್‌ಗೆ ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ. ಕೇಂದ್ರ ಸರ್ಕಾರದ ನೆರವು ನಮಗೆ ಸಿಕ್ಕದೆ ಹೋಗಿದ್ದರೆ, ಈ ಪ್ರಸ್ತಾವನೆಗಳು ಮುಂದಿನ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಪರಿಶೀಲನಾ ಹಂತಕ್ಕೆ ಬರುತ್ತಿತ್ತು. ಆದರೆ ಕೇಂದ್ರ ಸರ್ಕಾರದ ಆರ್ಥಿಕ ಸಚಿವರಾದಂಥ ಶ್ರೀ ಯಶವಂತಸಿನ್ಹರವರು ವಿಶೇಷವಾದಂತಹ ಆಸಕ್ತಿಯನ್ನು ತೋರಿಸಿ ಈ ಮೂರು ಯೋಜನೆಗಳು ಮುಂದಿನ ಮೇ ತಿಂಗಳೊಳಗಾಗಿ ವಿಶ್ವ ಬ್ಯಾಂಕ್ ಬೋರ್ಡ್ ಮುಂದೆ ಇಟ್ಟು ಪಾಸ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಸನ್ಮಾನ್ಯ ಸಿಂಧ್ಯರವರು ಕೃಷ್ಣಾ ಮೇಲ್ದಂಡೆ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದರು. ಕೃಷ್ಣಾಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್‌ನವರು ಸಾಲ ಸೌಲಭ್ಯಗಳನ್ನು ಕೊಡತಕ್ಕಂಥದನ್ನು ನಿಲ್ಲಿಸಿದ್ದು, ನಾವು ಮತ್ತೆ ಇದನ್ನು ಕೇಳುವುದಕ್ಕೆ ಹೋಗಿಲ್ಲ. ಹಿಂದಿನ ಸರ್ಕಾರದವರು ಮಾಡಿದಂಥ ಒಂದು ಬದಲಾವಣೆಯ ಪರಿಸ್ಥಿತಿಯನ್ನು ನಾವು ಗಮನಿಸಿ, ಬಾಂಡ್ ಮೂಲಕ ಹಣವನ್ನು ತಲೆಕ್ಟ್ ಮಾಡಿ ಕೃಷ್ಣಾ ಮೇಲ್ದಂಡೆ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಮುಗಿಬೇಕೆಂದು ಪ್ರಯತ್ನ ಮಾಡಿದ್ದೇವೆ. ಈ ಪ್ರಯತ್ನದ ಚೌಕಟ್ಟಿನೊಳಗೆ ಇನ್ನು ಎರಡು ವರ್ಷದಲ್ಲಿ ಕೃಷ್ಣಾಮೇಲ್ದಂಡೆ ಯೋಜನೆಯ ಎಲ್ಲಾ ಕೆಲಸ ಕಾರ್ಯಗಳು ಪೂರ್ಣವಾಗುತ್ತದೆ ಎಂದು ಸನ್ಮಾನ್ಯ ನೀರಾವರಿ ಸಚಿವರು ಈಗಾಗಲೇ ಘೋಷಣೆಯನ್ನು ಮಾಡಿದ್ದಾರೆ. ಆದ್ದರಿಂದ ವಿಶ್ವಬ್ಯಾಂಕ್‌ನ ನೆರವು ಕೃಷ್ಣಾ ಮೇಲ್ದಂಡೆ ಯೋಜನೆಗೆ ಉದ್ಭವಿಸುವುದಿಲ್ಲ. ವಿಶ್ವಬ್ಯಾಂಕಿನ ಷರತ್ತುಗಳನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಬೇರೆಯವರು ಕೊಡತಕ್ಕಂಥ ಸಾಲಕ್ಕೆ ಹೋಲಿಸಿದರೆ, ವಿಶ್ವಬ್ಯಾಂಕ್ ನವರು ಕೊಡತಕ್ಕಂಥ ಸಾಲದ ಹಣವನ್ನು ಮರುಪಾವತಿ ಮಾಡಲು ೨೫ ವರ್ಷಗಳ ಕಾಲದವರೆಗೆ ಅವಧಿ ಇರುತ್ತದೆ. ಇದರಲ್ಲಿ ೨೦ ವರ್ಷದ ಜೊತೆಗೆ ೫ ವರ್ಷಗಳ ಕಾಲ ಗ್ರೇಸ್ ಪೀರಿಯಡ್ ಸೇರಿದ್ದು, ಒಟ್ಟು ೨೫ ವರ್ಷಗಳ ಅವಧಿಯಲ್ಲಿ ಸಾಲದ ಹಣವನ್ನು ತೀರಿಸಬೇಕಾಗುತ್ತದೆ. ಇನ್ನು ಬಡ್ಡಿದರದ ಬಗ್ಗೆ ಹೇಳುವುದಾದರೆ, ನಾವು ಮರುಪಾವತಿ ಮಾಡುವುದರ ಬಗ್ಗೆ ಡಿಪೆಂಡ್ ಆಗುತ್ತದೆ. ಆದ್ದರಿಂದ ಬಡ್ಡಿದರದ ಬಗ್ಗೆ ನಿರ್ದಿಷ್ಟವಾಗಿ ಇಷ್ಟೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸಾಲ ಮಂಜೂರಾದಾಗ ಪ್ರತಿಯೊಂದು ಹಂತದಲ್ಲಿಯೂ ಕೂಡ ಬೇರೆ ಬೇರೆ ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗುತ್ತದೆ. ನಾನು ಈಗಾಗಲೇ ಹೇಳಿದ ರೀತಿ ಸಾಲದ ರೀ-ಪೇಮೆಂಟಿಗೆ ೨೫ ವರ್ಷಗಳವರೆಗೆ ಅವಕಾಶ ಇರುತ್ತದೆ. ಸನ್ಮಾನ್ಯ ಹನುಮೇಗೌಡರು ಈಗಾಗಲೇ ಮಾತನಾಡುತ್ತಾ ಸಾಲ ತರುತಕ್ಕಂಥ ಹಣ ಸರಿಯಾಗಿ ವಿನಿಯೋಗ ಆಗಬೇಕೆಂದು ಸಲಹೆ ಕೊಟ್ಟರು ಬೇರೆ ಕಡೆಯಿಂದ ತಂದಂಥ ಹಣ ಯಾವುದಕ್ಕೆ ಪೂರ್ಣ ಪ್ರಮಾಣದಲ್ಲಿ ವಿನಿಯೋಗ ಆಗದಿದ್ದರೂ ಕೂಡ ೯೦ ಪರ್ಸೆಂಟ್‌ನಷ್ಟು ವಿನಿಯೋಗ ಮಾಡತಕ್ಕಂಥ ಗುರಿಯನ್ನು ಇಟ್ಟುಕೊಳ್ಳುತ್ತೇವೆ ಎನ್ನತಕ್ಕಂಥ ಭಾವನೆಯನ್ನು ಇಲ್ಲಿ ವ್ಯಕ್ತಪಡಿಸುತ್ತೇನೆ. ಇವಿಷ್ಟೇ ಕೆಲವು ರಸ್ತೆಗಳ ವಿಚಾರವಾಗಿ

ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ರಸ್ತೆಗಳು ಕೆಟ್ಟಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈಗ ಹೊಸದಾಗಿ ಮಾಡತಕ್ಕಂಥ ರಸ್ತೆಗಳನ್ನು ಒಂದು ವೈಜ್ಞಾನಿಕ ತಳಹದಿಯ ಮೇಲೆ ನಾವು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

10.20 ಪಿ.ಎಂ.

+ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ ನಾವು ಈ ಹಿಂದೆ ಎಡಿಬಿ ಪ್ರಾಜೆಕ್ಟ್‌ನ್ನು ತಂದಿದ್ದೇವೆ. ವಿಶ್ವಬ್ಯಾಂಕ್ ಇದರ ಬಗ್ಗೆ ಬಹಳಷ್ಟು ಚರ್ಚೆಯಾಯಿತು, ಇಲ್ಲಿ ಅವರು ಗ್ಲೋಬಲ್ ಟೆಂಡರ್ಸ್ ಎಂದು ಹೇಳಿ ಯಾರಿಗೋ ಕೊಟ್ಟು, ಅವರು ಆ ಕೆಲಸವನ್ನು ಇಲ್ಲಿ ಯಾರೋ ಕೈಯಲ್ಲಿ ಮಾಡಿಸುತ್ತಾರೆ. ಅದು ಸರಿಯಾದ ರೀತಿಯಲ್ಲಿ ಕಾರ್ಯಗತವಾಗುವುದಿಲ್ಲ, ಇದರ ಬಗ್ಗೆ ತಾವು ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ನಿನ್ನೆ ದಿವಸ ಸದನದಲ್ಲಿ ಹಾಗೋಡು ತಿಮ್ಮಪ್ಪನವರು ಇದ್ದರು, ತಾವು ಸದನದಲ್ಲಿ ಇರಲಿಲ್ಲ, ನಾನು ಇದರ ಬಗ್ಗೆ ಪ್ರಸ್ತಾವವನ್ನು ಮಾಡಿದ್ದೆ. ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್ಸ್, ಎಡಿಬಿ ಮತ್ತು ಓವರ್‌ಸೀಸ್ ಬ್ಯಾಂಕ್ ಏನು ಎಕ್ಸ್‌ಟರ್ನಲ್ ಏಡೆಡ್ ಪ್ರಾಜೆಕ್ಟ್‌ಸ್‌ಗಳು ಇದೆ ಇಲ್ಲಿ ಎಕ್ಸಿಕೂಷನ್ ಬಹಳ ಕೆಟ್ಟದಾಗಿ ನಡೆಯುತ್ತಿದೆ; ಸಮಯಕ್ಕೆ ಸರಿಯಾಗಿ ಕೆಲಸಗಳಾಗುತ್ತಿಲ್ಲ. ಇಲ್ಲಿ ಅದನ್ನು ಬೇರೆ ಸಬ್-ಕಂಟ್ರಾಕ್ಟರ್‌ಗಾರರುಗಳಿಗೆ ಅದನ್ನು ಕೊಡುತ್ತಾರೆ, ಅವರು ಸರಿಯಾದ ಸಮಯಕ್ಕೆ ಕೆಲಸವನ್ನು ಮುಗಿಸುವುದಿಲ್ಲ. ಕಳೆದ ಹತ್ತಾರು ವರ್ಷಗಳಿಂದ ಇಂತಹ ಪ್ರಾಜೆಕ್ಟ್‌ಸ್, ಹಾಗೆಯೇ ನಿಂತುಕೊಂಡಿದೆ. ಮಾನ್ಯ ಹನುಮೇಗೌಡರು ಹೇಳಿರುವುದರಲ್ಲಿ ಬಹಳ ಸತ್ಯಾಂಶವಿದೆ. ಆ ಎಕ್ಸಿಕ್ಯೂಷನ್‌ನಲ್ಲಿ ಸರಿಯಾಗಿ ಕೆಲಸಗಳಾಗುತ್ತಿಲ್ಲ, ಅದರ ಬಗ್ಗೆ ಏನಾದರೊಂದು ವ್ಯವಸ್ಥೆಗಳು ಆಗದೆಹೋದರೆ ಎಕ್ಸ್‌ಟರ್ನಲ್ ಏಡೆಡ್ ಪ್ರಾಜೆಕ್ಟ್‌ಗಳಿಗೆ ಒಂದು ಕಡಿವಾಣವನ್ನು ಹಾಕದೆ ಹೋದರೆ ನಮ್ಮ ಬೊಕ್ಕಸಕ್ಕೆ ನಷ್ಟವಾಗುತ್ತದೆ. ನಾವು ವಾಪಸ್ಸು ಕೊಡುವಂತಹ ಹಣವಾಗಿದೆ ಈ ಎಲ್ಲಾ ಕೆಲಸಕಾರ್ಯಗಳು ಆಗದೆ ಹಾಗೆಯೇ ಉಳಿದುಕೊಂಡಿದೆ. ಅದಕ್ಕೆ ದಯವಿಟ್ಟು ತಾವು if you could apply your mind, Sir, ಇದು ಸರಿಹೋಗುತ್ತದೆ. ತಾವು 27 ಸಾವಿರ ಕೋಟಿ ರೂಪಾಯಿಗಳು ಸಾಲವು ಬರುವುದಿದೆ, ಎಕ್ಸ್‌ಟರ್ನಲ್ ಏಡೆಡ್ ಪ್ರಾಜೆಕ್ಟ್ಸ್, ಬೇರೆ ಬೇರೆ ರೀತಿಯಲ್ಲಿ ಬರುವುದಿದೆ. ಮೂಲಭೂತ ಸೌಕರ್ಯಗಳಿಗೆ ಇದು ಉಪಯೋಗವಾಗುತ್ತಿಲ್ಲ, ಇದು ಹಾಗೆಯೇ ಉಳಿದುಕೊಂಡಿದೆ, ಇದಕ್ಕೆ ನಮ್ಮ ಸ್ಟೇಟ್ ಲಯಾಬಿಲಿಟಿ ಇದೆ. ನಾವು ಆ ಸಾಲವನ್ನು ವಾಪಸ್ಸು ತೀರಿಸುವುದರಿಂದ ನಾವು ಏನಾದರೊಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಕೆಲಸಗಳು ಆಗದೆ, ಹೀಗೆ ಮುಂದುವರಿದುಕೊಂಡು ಹೋದರೆ ಕಾಸ್ಟ್ ಎಸ್ಕಲೇಷನ್‌ಗಳು ಜಾಸ್ತಿಯಾಗಿ ಇದರ ಹೆಚ್ಚು ಹೊರೆ ಸರ್ಕಾರದ ಮೇಲೆ ಬೀಳುತ್ತದೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಬಚ್ಚೇಗೌಡರು ಹೇಳಿದಹಾಗೆ, ಪ್ರೀ ಕ್ವಾಲಿಫಿಕೇಷನ್ ಆಫ್ ಟೆಂಡರ್ ಈಗಾಗಲೇ ನಾವು ಎಲ್ಲಾ ಕಡೆ ಇಂಟರ್‌ನ್ಯಾಷನಲ್ ಕಾಂಪಿಟೇಶನ್ ಬಿಡ್‌ನ್ನು ಕರೆದಿದ್ದೇನೆ. ನಮ್ಮ ಅನುಭವಕ್ಕೆ ಏನು ಬಂದಿದೆಯೆಂದರೆ, ಬಹಳಷ್ಟು ಜನ ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ we had discussion with them. ಸಬ್ ಕಾಂಟ್ರಾಕ್ಟ್‌ಗಳನ್ನು ಕೊಟ್ಟು ಹೋಗುತ್ತಾರೆ. ನಾವು ಈಗ ಏನು ಮಾಡಿದ್ದೇವೆಂದರೆ, We have made a provision first time in Karnataka, even for sub-contracts, pre-qualification should be there. ಅವರಿಗೆ ಕೊಡತಕ್ಕಂತಹ ಪ್ರಾವಿಜನ್ ಅವರ ಮೇಲೆ ಇದೆ we made that.

ಶ್ರೀ ಜೆ.ಟಿ. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ರಸ್ತೆ ದುರಸ್ತಿಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು, ಇವತ್ತು ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಮೈನ್‌ಟೆನೆನ್ಸ್ ಗ್ರಾಂಟ್ಸ್‌ಗಳು ಇಲ್ಲದಿದ್ದುದರಿಂದ ಆ ರಸ್ತೆಗಳು ಬಹಳ ಹದೆಗೆಟ್ಟಿರುತ್ತದೆ. ಆ ವಿಚಾರದ ಬಗ್ಗೆ ತಾವು ಗಮನಹರಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಅವು ಜಿಲ್ಲಾ ಪಂಚಾಯತ್ ರಸ್ತೆಗಳು ಅದನ್ನು ಇನ್ನು ಪಿಡಬ್ಲ್ಯೂಡಿಯವರು ತೆಗೆದುಕೊಂಡಿಲ್ಲ, ಆ ರಸ್ತೆಗಳು ರಿಪೇರಿಯಾ ಸಹ ಆಗದೆ ಇರುವುದರಿಂದ ಅದು ಇನ್ನಷ್ಟು ಹದಗೆಡುವ ಸಾಧ್ಯತೆಗಳಿವೆ. ಮಾನ್ಯ ಮುಖ್ಯಮಂತ್ರಿಗಳೆ, ಈ ನಬಾರ್ಡ್ ರಸ್ತೆಯನ್ನು ಹಾಗೆಯೇ ಬಿಟ್ಟರೆ ಪುನಃ ಹಾಳಾಗುವ ಸಾಧ್ಯತೆಗಳಿವೆ. ಆ ರಸ್ತೆಗೆ ಮೈನ್‌ಟೆನೆನ್ಸ್ ಇಲ್ಲ, ರಿಪೇರಿಯೂ ಇಲ್ಲದಾಗಿದೆ. ಆ ರಸ್ತೆಗಳು ಗಗ್ಗುನಿಂದ ಕೂಡಿಕೊಂಡಿರುತ್ತದೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ನಾವುಗಳು ರಸ್ತೆಯನ್ನು ನಬಾರ್ಡ್‌ನ ನೆರವಿನಿಂದ ಮಾಡುತ್ತೇವೆ, ಜಿಲ್ಲಾ ಪಂಚಾಯತ್ ರಸ್ತೆಗಳಾಗಿದ್ದರೂ ಕೂಡ ಅದನ್ನು ನಬಾರ್ಡ್‌ನವರು ತೆಗೆದುಕೊಂಡು ರಸ್ತೆಯನ್ನು ಮಾಡುತ್ತಾರೆ. ಆ ರಸ್ತೆಯನ್ನು ಮಾಡಿದ ನಂತರ ಅವರು ಸರಿಯಾಗಿ ಮೈನ್‌ಟೆನೆನ್ಸ್‌ನ್ನು ಮಾಡುವುದಿಲ್ಲ. ಇದನ್ನು ಯಾರು ಮಾಡಬೇಕು ನನಗೆ ಗೊತ್ತಿಲ್ಲ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ನಾವು ನಬಾರ್ಡ್ ಸಂಸ್ಥೆಯವರಿಂದ ತೆಗೆದುಕೊಂಡು ರಸ್ತೆಗಳನ್ನು ಮಾಡುತ್ತೇವೆಯೋ, ಆ ರಸ್ತೆಗಳನ್ನು ಪಿಡಬ್ಲ್ಯೂಡಿಯವರು ವಾಪಸ್ಸು ತೆಗೆದುಕೊಂಡು ಅದರ ದುರಸ್ತಿಯನ್ನು ಪಿಡಬ್ಲ್ಯೂಡಿಯವರು ಮಾಡುತ್ತಾ ಹೋದರೆ ಆ ರಸ್ತೆಗಳು ಕೆಲವು ಕಾಲ ಬರುತ್ತದೆ; ಇಲ್ಲದಿದ್ದರೆ ಅದು ಬರುವುದಿಲ್ಲ. ಇನ್ನು ಎರಡನೆಯದಾಗಿ, ಹೇಳುವುದಾದರೆ, ನಬಾರ್ಡ್ ಸ್ಕೀಮ್‌ನಲ್ಲಿ ಇತ್ತೀಚೆಗೆ ತಾವು ಏನು ಮಾಡಿದ್ದೀರೋ ನನಗೆ ಗೊತ್ತಿಲ್ಲ, ಅಲ್ಲಿ ಚರಂಡಿಗಳು ಇಲ್ಲ,

ಮಲೆನಾಡಿನಲ್ಲಿ ಚರಂಡಿಗಳಿಲ್ಲದೆ ರಸ್ತೆಗಳನ್ನು ಮಾಡಿದರೆ ಈ ರಸ್ತೆಯು ಒಂದು ವರ್ಷವೂ ಕೂಡ ನಿಲ್ಲುವುದಿಲ್ಲ. ಈ ಸಾರಿ ಬದ್ಧಹಾಗೆ ಮಳೆ ಬಂದರೆ ಆ ರಸ್ತೆಗಳು 6 ತಿಂಗಳು ಸಹ ಇರುವುದಿಲ್ಲ. ತಾವು ಚರಂಡಿಗೆ ಪ್ರಾವಿಷನ್ ಇಡಲೇಬೇಕು, ನನ್ನ ಮೂರನೆಯ ಬೇಡಿಕೆ ಏನೆಂದರೆ, ಮಲೆನಾಡಿನಲ್ಲಿ ಒಳಗಡೆ ಹೋಗಬಹುದಂತಹ ರಸ್ತೆಗಳನ್ನು ತಾವು ಪ್ಲೈಓವರ್ ಮೇಷಿನಲ್ಲಿ ಮಾಡಬೇಕೆಂದು ನಬಾರ್ಡ್‌ನವರು ಕಡ್ಡಾಯವನ್ನು ಮಾಡಿದ್ದಾರೆ. ಆ ಮೇಷಿನ್ ಯಂತ್ರವು ನಮ್ಮ ರಸ್ತೆಯಲ್ಲಿ ಹೋಗುವುದಷ್ಟಾಗುವುದಿಲ್ಲ. ಏಕೆಂದರೆ ನಮ್ಮ ರಸ್ತೆಗಳ ಅಗಲವು ಕಡಿಮೆ ಇರುತ್ತದೆ. ಒಂದು ಪಕ್ಷ ಹೋದರೂ ಕೂಡ ಅದೊಂದು ರಸ್ತೆಯ ಮೂಲಕ ಹೋಗಬೇಕಾಗುತ್ತದೆ, ಎದುರುಬದುರು ವಾಹನಗಳು ಹೋಗುವುದಷ್ಟಾಗುವುದಿಲ್ಲ, ರಸ್ತೆಯಾಗುವವರೆಗೂ ವಾಹನಗಳನ್ನು ನಿಲ್ಲಿಸಬೇಕಾಗುತ್ತದೆ. ಪರ್ಟಿಕ್ಯುಲರ್ ಆಗಿ ನಬಾರ್ಡ್‌ನಲ್ಲಿ ಮಾಡತಕ್ಕಂತಹ ಈ ಸ್ಕೀಂ ಮಲೆನಾಡಿನಲ್ಲಿ ತಾವು ಏನು ಮಾಡುತ್ತೀರಿ ಅಲ್ಲಿ ಇದನ್ನು ಉಪಯೋಗಿಸಬೇಕೆಂಬ ಕಡ್ಡಾಯ ಇರಬಾರದು, ಎಲ್ಲಿ ರಸ್ತೆಗಳು ವಿಶಾಲವಾಗಿದೆಯೋ ಅಲ್ಲಿ ಇದನ್ನು ಉಪಯೋಗಿಸಿಕೊಳ್ಳಿರಿ ಈ ಮೂರು ಕೆಲಸಗಳನ್ನು ತಾವು ಮಾಡಿಕೊಟ್ಟರೆ ತಾವು ಮಾಡಿದಂತಹ ಕೆಲಸಗಳು ಶಾಶ್ವತವಾಗಿ ಆ ರಸ್ತೆಗಳು ಹಲವಾರು ವರ್ಷಗಳ ಕಾಲ ಬಾಳಿಕೆ ಬರುತ್ತದೆಂದು ನನ್ನ ಅನಿಸಿಕೆಯಾಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕಿನಿಂದ ಕೋಟಿಗಟ್ಟಲೆ ಹಣವು ಬಂದು, ಯಾವ ಯಾವ ಪ್ರಾಜೆಕ್ಟ್‌ಗಳಿಗೆ ಹಣವು ಖರ್ಚಾಗುತ್ತಿದೆಯೋ, ಆ ಕೆಲಸಗಳು ಹೇಗೆ ಆಗುತ್ತಿದೆಯೋ, ಎಂಬುದರ ಬಗ್ಗೆ ಇಲಾಖೆಯ ಅಧಿಕಾರಿಗಳ ಮೇಲೆ ಡಿಸಿಪ್ಲಿನ್ ಆಗದೆ ಬಹಳ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಈ ಕೆಲಸವನ್ನು ಮಾಡಿ ನಿವೃತ್ತಿ ಹೊಂದಿದ ತಜ್ಞರ ಒಂದು ಗುಂಪನ್ನು ಆಂಧ್ರಪ್ರದೇಶದ ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಂಡಿದ್ದಾರೆ. ಇವತ್ತು ಆ ಕೆಲಸಗಳಾಗುತ್ತದೆಂದು ಗೊತ್ತಾದರೆ ಅದರ ಬಗ್ಗೆ 2 ದಿವಸಗಳಲ್ಲಿ ವರದಿಯು ಬರುತ್ತದೆ, ಆ ವರದಿಯು ಬರುವುದು ಒಬ್ಬರಿಗೂ ಸಹ ಗೊತ್ತಾಗುವುದಿಲ್ಲ. ಒಬ್ಬರಿಗೂ ಗೊತ್ತಾಗದೆ ಆ ರಿಪೋರ್ಟ್‌ನ್ನು ತರಿಸಿಕೊಂಡು ತುರ್ತಾಗಿ ಹೋಗಿ ನೋಡಿ ಅವರನ್ನು ಸಸ್ಪೆಂಡ್ ಮಾಡಿ ಆತನ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹೀಗಾಗಿ ಅಲ್ಲಿ ಕ್ವಾಲಿಟಿ ಬಹಳ ಚೆನ್ನಾಗಿ ಇಂಪ್ರೂವ್ ಆಗಿದೆ. ನೀವು ಆ ರೀತಿ ಮಾಡುತ್ತಿಲ್ಲವೆಂದು ಹೇಳುತ್ತಿಲ್ಲ, ಆಗ ಸ್ವಲ್ಪ ಚೆನ್ನಾಗಿ ಆಗುತ್ತಿದೆ, ಆದರೂ ಸಹ ಪೂರ್ಣಪ್ರಮಾಣದಲ್ಲಿ ಆ ಕೆಲಸಗಳಾಗುತ್ತಿಲ್ಲ. ಅಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಿಕೊಳ್ಳಬೇಕು, ಮಾನ್ಯ ಮುಖ್ಯಮಂತ್ರಿಗಳು, ಪಿಡಬ್ಲ್ಯೂಡಿ ಮಂತ್ರಿಗಳು, ಇದನ್ನು ಇಟ್ಟುಕೊಂಡು ಆ ರೀತಿಯಾಗಿ ತಾವು ನೋಡಿಕೊಂಡರೆ ಆಗ ಅವರಿಗೆ ಸ್ವಲ್ಪ ಭಯ ಬರುತ್ತದೆ, ಅವರು ಹೆದರಿಕೊಂಡು ಒಳ್ಳೆಯ ಕೆಲಸವನ್ನು ಮಾಡುತ್ತಾರೆಂಬ ಸಲಹೆಯನ್ನು ನಾನು ತಮಗೆ ಕೊಡುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಆಂಧ್ರಪ್ರದೇಶದಲ್ಲಿ ಏನು ನಡೆಯುತ್ತಿದೆ, ತಮಿಳುನಾಡಿನಲ್ಲಿ ಏನು ನಡೆಯುತ್ತಿದೆ, ಎಂದು ಹೇಳಿ ಕರ್ನಾಟಕಕ್ಕೆ ಬಂದ ತಕ್ಷಣ ನಿದ್ರೆ ಬರುವುದಿಲ್ಲವೆಂದು, ಆಂಧ್ರದಲ್ಲಿ ಸಲೀಸಾಗಿ ನಿದ್ರೆಯನ್ನು ಮಾಡಬಹುದೆಂದು ಮಾನ್ಯ ಹನುಮೇಗೌಡರ ಅನುಭವವಿದೆ, ಅದಕ್ಕೆ ನಾವು ಬಿಸಿನಲ್ಲಿ, ಅಲ್ಲಿಗೆ ಕಳುಹಿಸುವುದಿಲ್ಲ, ಯಾರನ್ನಾದರೂ ಕಳುಹಿಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಬೇರೆ ಸದಸ್ಯರುಗಳಾದರೂ ತಾವು ಕೇಳಬಹುದು, ಅಲ್ಲಿ ಆ ರೀತಿಯ ವ್ಯವಸ್ಥೆಗಳಾಗುತ್ತಿದೆ, ಎಂಬ ಉದಾಹರಣೆಯನ್ನು ಹೇಳಿದ್ದೇನೆಯೇ ವಿನಃ ನಾನು ಯಾವ ವಿಧವಾದ ದೋಷಾರೋಪಣೆಯನ್ನು ಮಾಡುತ್ತಿಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಹನುಮೇಗೌಡರೆ, ತಾವು ಸದ್ಭಾವನೆಯಿಂದಲೇ ಆ ರೀತಿ ಹೇಳಿದ್ದೀರಿ, ಇಂಗ್ಲೀಷ್‌ನಲ್ಲಿ, ಹೇಳುತ್ತಾರೆ, ``The grass is greener at the other end" ಅದಕ್ಕೆ ನಮ್ಮ ಕನ್ನಡದಲ್ಲಿ, "ದೂರದ ಬೆಟ್ಟ ನುಣ್ಣಗೆ' ಎಂದು ಹೇಳುತ್ತಾರೆ. ಇದರ ಬಗ್ಗೆ ಇಂಗ್ಲೀಷ್ ಹಾಗೂ ಕನ್ನಡದಲ್ಲಿಯೂ ಸಹ ಗಾದೆಗಳು ಇದೆ. ನೀವು ಅಲ್ಲಿರುವ ಕಾಂಗ್ರೆಸ್ ಪಾರ್ಟಿಯವರನ್ನು ಅಲ್ಲಿ, ಏನು ನಡೆಯುತ್ತಿದೆ ಎಂಬುದರ ಬಗ್ಗೆ ಕೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಆಂಧ್ರದಲ್ಲಿರುವ ಕಾಂಗ್ರೆಸಿನವರನ್ನು ನಾವು ಫಾಲೋ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ನಾವುಗಳು ಫಾಲೋ ಮಾಡಿದರೆ ನಿಮಗೆ ಕಷ್ಟವಾಗುತ್ತದೆ. ಅಲ್ಲಿ, ಅವರು ಮೈನರ್ ಅಪೋಜಿಷನ್ ಅದು ತಮಗೂ ಗೊತ್ತಿದೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಆದರೆ ತಾವು ಹೇಳತಕ್ಕಂತಹ ಪ್ರತಿಯೊಂದು ಮಾತಿನಲ್ಲಿಯೂ ಕೂಡ ಸತ್ಯದ ಲೇಪವಲ್ಲ, ಪೂರ್ಣಪ್ರಮಾಣದ ಸತ್ಯವಿದೆ. ಅದು ಏನೆಂದರೆ, ನಮ್ಮ ನಾಯಕರಾದಂತಹ ಮಾಜೀ ಪ್ರಧಾನಮಂತ್ರಿಗಳಾದ ದಿವಂಗತ ಶ್ರೀ ರಾಜೀವ್ ಗಾಂಧಿಯವರು ಈ ರೂರಲ್ ಡೆವಲಪ್‌ಮೆಂಟ್‌ಗೆ ಏನು ಹಣವನ್ನು ಕೊಡುತ್ತಿದ್ದೇವೆ ಅದು ಕೊನೆಯವನಿಗೆ ಎಷ್ಟು ಹಣ ಸಿಗುತ್ತದೆ ಎನ್ನುವುದನ್ನು ಅವರು ಸ್ವಂತ ಅನುಭವದಿಂದ ಹೇಳಿದ್ದರು. ಆದರೆ ಮೌಲ್ಯತ ಪರಿವರ್ತನೆ ಸಮಾಜದಲ್ಲಿ, ಆಗದ ಹೊರತು ಈ ಸುಧಾರಣೆಗಳು, ಕೆಲಸಗಳು ಏನು ಸರ್ಕಾರದ ಮತಿಯಿಂದ ನಾವು ಮಾಡುತ್ತೇವೆಯೋ ಅದಕ್ಕೆ ವಿಶ್ವ ಬ್ಯಾಂಕ್‌ನವರು ಪಬ್ಲಿಕ್ ಪ್ರೈವೇಟ್ ಕೋ-ಆಪರೇಷನ್, ಗೌರ್ಮೆಂಟ್, ಪ್ರೈವೇಟ್ ಕೋ-ಆಪರೇಟಿವ್ ಈಗ ರಸ್ತೆಗಳು ಆಗತಕ್ಕಂತಹ ಕಾಲದಲ್ಲಿ, ಶಾಸನಸಭಾ ಸದಸ್ಯರುಗಳಿದ್ದಾರೆ, ಜಿಲ್ಲಾ ಪಂಚಾಯತ್ ಸದಸ್ಯರುಗಳಿದ್ದಾರೆ, ಅವರು ಸ್ವಂತ ವೈಯಕ್ತಿಕವಾಗಿ ಇದರ ಬಗ್ಗೆ ಗಮನವನ್ನು ಹರಿಸಬೇಕು. ಗುಣಮಟ್ಟದ ಕೆಲಸಗಳು ಆಗುತ್ತಿದೆಯೇ ಇಲ್ಲವೇ ಎಂಬುದರ ಬಗ್ಗೆ ಗಮನವನ್ನು ಹರಿಸಬೇಕು. ನಾವು ಯಾರನ್ನು

ಹಾಕಬೇಕು? ಕೆಲವೊಂದು ಸಂದರ್ಭದಲ್ಲಿ ಕೆಲವು ಸದಸ್ಯರುಗಳು ವೈಯುಕ್ತಿಕವಾಗಿ ಅಯ್ಕೆ ಮಾಡಬೇಕೆಂದು ವ್ಯಕ್ತಪಡಿಸುತ್ತೀರಿ, ಗುಣಮಟ್ಟದ ಕೆಲಸಗಳು ಅಲ್ಲಿ ಆಗುತ್ತಿದೆಯೇ, ಇಲ್ಲವೇ, ಆಗದಿರುವ ಕಡೆಗೆ ವಿಚಾರವನ್ನು ತೆಗೆದುಕೊಂಡು ಹೋದರೆ ಅದಕ್ಕೆ ತತ್‌ಕ್ಷಣ ನಾವು ಸುಧಾರಣೆಯ ಕ್ರಮವನ್ನು ಮಾಡಲಿಕ್ಕೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವನ್ನು ಅನುಸರಿಸುವಂತೆ ಹೇಳಿದ್ದೇನೆ. ಈ ತಿಂಗಳು 27ನೇ ತಾರೀಖು ನಾನು ಕೇಂದ್ರದ ವಿಜಿಲೆನ್ಸ್ ಕಮೀಷನರ್ ಶ್ರೀ ವಿಠಲ್‌ರವರ ಜೊತೆಯಲ್ಲಿ, ಸಮಾಲೋಚನೆಗೋಸ್ಕರ ಕಾಲವನ್ನು ಗೊತ್ತು ಮಾಡಿಕೊಂಡು ಬಂದಿದ್ದೇನೆ. ಮೂಲಭೂತವಾಗಿ ನಾವು ಈ ಸಿವಿಲ್ ಸರ್ವಿಸ್ ರೂಲ್ಸ್‌ಗೆ ನಾವು ಈ ದಿವಸ ಅಮೆಂಡ್‌ಮೆಂಟ್ಸ್‌ನ್ನು ತರಬೇಕಾಗುತ್ತದೆ. ಆದರೆ ನಾವು ತರತಕ್ಕಂತಹ ಅಮೆಂಡ್‌ಮೆಂಟ್ಸ್, it has to stand, the semting of the test of the law; ಅದು ಕೋರ್ಟಿನಲ್ಲಿ ಹೇಗೆ ಆಗುತ್ತದೆಯೋ ಗೊತ್ತಿಲ್ಲ. ಏಕೆಂದರೆ ಅಕೌಂಟಬಿಲಿಟಿ ಇರಬೇಕೆನ್ನುವುದು ಸಾರ್ವಜನಿಕರಿಂದ ಚುನಾಯಿತರಾಗಿದಂತಹ ನಾವು, ಯಾವ ಕೆಲಸವನ್ನು ಮಾಡುವುದಕ್ಕಾದರೂ ಅಧಿಕಾರಿಗಳಲ್ಲಿ, ಅಕೌಂಟಬಿಲಿಟಿ ಇರಬೇಕು ಇವತ್ತು ಅಂತಹ ಅಕೌಂಟಬಿಲಿಟಿ ಇಲ್ಲ. ಒಬ್ಬ ಅಧಿಕಾರಿ ಇಲ್ಲಿ ಕೆಡಿಸಿದ ಎಂದು ಹೇಳಿದರೆ ಅವನನ್ನು ಬೇರೆ ಕಡೆಗೆ ವರ್ಗಮಾಡಬಹುದೇ ವಿನಃ ಆತನ ಮೇಲೆ ಶಿಕ್ಷೆ ಮಾಡುವುದಕ್ಕೆ ಇವತ್ತಿನ ರೂಲ್ಸ್‌ನ ಪ್ರಕಾರ ನಮಗೆ ಶಕ್ತಿ ಇಲ್ಲ, ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ ಮೂಲಭೂತವಾದಂತಹ ಈ ಅಧಿಕಾರಿತಾಹಿಯ ಬಗ್ಗೆ ಮೂಲಭೂತವಾದಂತಹ ಸಾರ್ವಜನಿಕ ಚರ್ಚೆ ಈ ದೇಶದಲ್ಲಿ ಆಗಬೇಕಾಗಿರತಕ್ಕಂತಹ ಕಾಲ ಸನ್ನಿಹಿತವಾಗಿದೆ ಎಂದು ನಾನು ಭಾವನೆಯನ್ನು ಮಾಡಿಕೊಳ್ಳುತ್ತೇನೆ. ಉತ್ತರ ಪ್ರದೇಶ, ಬಿಹಾರ, ಅಸ್ಸಾಂ, ಕರ್ನಾಟಕ, ಆಂಧ್ರ, ತಮಿಳುನಾಡುಗಳಲ್ಲಿ, ನೀನೇನು ನಡೆಯುತ್ತಿದೆ, ಅಧಿಕಾರಿಶಾಹಿಗಳು ಹೇಗೆ ಜನಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ ಎನ್ನುವ ಬಗ್ಗೆ ಪೂರ್ಣ ಪ್ರಮಾಣದ ಸಾರ್ವಜನಿಕ ಚರ್ಚೆಯಾಗಬೇಕು. ಅನಂತರ ಸುಧಾರಣೆಗಳನ್ನು ನಾವು ನೀವು ಅಪೊಲಿಟಿಕಲ್ ಆಗಿ ರಾಜಕೀಯತೀತವಾಗಿ ಒಂದಾಗಬೇಕಾಗುತ್ತದೆ. ಏಕೆಂದರೆ ನಾವು ಖರ್ಚು ಮಾಡತಕ್ಕ ನೂರು ರೂಪಾಯಿಗಳಲ್ಲಿ, ಹೊಂಭತ್ತು ರೂಪಾಯಿಗಳಾದರೂ ಖರ್ಚಾಗುವ ಒಂದು ಭೂಮಿಕೆಯನ್ನು ನಾವು ಪ್ರಾರಂಭ ಮಾಡಬೇಕು. ನಾವು ಆಂಧ್ರದಲ್ಲಿ ಏನೋ ನಡೆಯುತ್ತಿದೆಯೆಂದು ಹೇಳಿದಿರಿ, ಅದನ್ನು ವಿಚಾರ ಮಾಡಿ ಅನಂತರ ಅನುಭವದ ಆಧಾರದ ಮೇಲೆ ನಾವೇನು ಮಾಡಬಹುದು ಅದನ್ನು ಅಗತ್ಯವಾಗಿ ಮಾಡೋಣ. ಏಕೆಂದರೆ ನಮ್ಮ ಉದ್ದೇಶ ಆಳ್ವಿ ದೊಡ್ಡ ಪ್ರಮಾಣದ ಸಾಲವನ್ನು ಮೊದಲು ಕಟ್ಟುವುದಕ್ಕೆ ಒಂದು ವರ್ಷ ಪ್ರಯತ್ನ ಮಾಡಿದ್ದೇವೆ. ಅನಂತರ ಅವರು ಸಾಲ ಕೊಡುವುದಕ್ಕೆ ಸಿದ್ಧ. ಸಾಲವನ್ನು ಕೊಡತಕ್ಕವರು ಏನ್ನವನ್ನು ನೋಡುತ್ತಾರೆ. ಈಗ ಎಡಿಬಿಯವರ ಮೇಲೆ ಬಹಳ ಕಂಪ್ಲೈಂಟ್ಸ್ ಇದೆ. ಎಡಿಬಿ ಡೈರೆಕ್ಟರ್ ಬಂದಾಗ ನಾನು ಹೇಳಿದ್ದೇನೆ. ಸಬ್ ಕಾಂಟ್ರಾಕ್ಟ್ ಕೊಡತಕ್ಕದ್ದು ಅದನ್ನು ಎಡಿಬಿಯವರು ತೀವ್ರವಾಗಿ ಪುನರ್ ಪರಿಶೀಲನೆ

ಮಾಡಬೇಕೆಂದು ಹೇಳಿದ್ದೇನೆ. ಆದರೆ ಮಾನ್ಯ ಲೋಕೋಪಯೋಗಿ ಸಚಿವರಾದ ಧರ್ಮಸಿಂಗ್‌ರವರು ಹೇಳಿದರು, ಅವರು ಏನಾದರೂ ಮಾಡಲಿ ನಾವು ಅವರ ಜೊತೆಯಲ್ಲಿ, ಅಗ್ರಿಮೆಂಟ್ ಮಾಡಿಕೊಳ್ಳತಕ್ಕ ಸಂದರ್ಭದಲ್ಲಿ ಸಬ್-ಕಾಂಟ್ರಾಕ್ಟ್ ಕೊಟ್ಟರೂ ಕೂಡ ಅವರಿಗೂ ಕೂಡ ಸಬ್ ಕಾಂಟ್ರಾಕ್ಟ್ ಮಾಡಲಿಕ್ಕೆ ಅರ್ಹತೆ ಇರಬೇಕು. ಪ್ರಿ ಕ್ವಾಲಿಫಿಕೇಶನ್ ಅವರಿಗೆ ಇರಬೇಕು. To some extent it becomes an insulating factor. ಅದ್ದರಿಂದ ಬಂದೋಬಸ್ತ್ ಅವರಲ್ಲಿರುತ್ತದೆ. ಆದರೂ ಇನ್ನು ಸುಧಾರಣೆಗಳನ್ನು ಅವರು ಮಾಡಬೇಕಾಗಿರತಕ್ಕದ್ದು ಅದಕ್ಕೋಸ್ಕರ ಎಕ್ಸ್‌ಟ್ರನಲ್ ಏಡೆಡ್ ಪ್ರಾಜೆಕ್ಟ್‌ನಲ್ಲಿ ಸೂಪರ್‌ವಿಷನ್‌ಗೆ ಒಬ್ಬ ಸೀನಿಯರ್ ಮಂತ್ರಿಗಳಿಗೆ ಅವರ ಹಿಡಿತಕ್ಕೆ ಇದೆಲ್ಲವನ್ನು ಕೊಡಬೇಕೆನ್ನುವ ಒಂದು ನಿರ್ಧಾರವನ್ನು ನಾನು ಮಾಡಿದ್ದೇನೆ. ಶೀಘ್ರದಲ್ಲಿ ಆದರ ಬಗ್ಗೆ ಪ್ರಕಟಣೆ ಒಂದನ್ನು ಹೊರಡಿಸುತ್ತೇನೆ. ಇದರಿಂದ ಏನಾಗುತ್ತದೆ ಎಂದರೆ ಎಕ್ಸ್‌ಟ್ರನಲ್ aided projects ಗಳಲ್ಲಿ he will become responsible, he will become accountable.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಹನುಮೇಗೌಡರು ಒಂದು ಪ್ರಪೋಸಲ್ಸ್ ತಂದರು. ಒಂದು ಟೀಮ್ ಮಾಡಿ ಇದನ್ನೆಲ್ಲ ತಾವೇ ಇಟ್ಟುಕೊಳ್ಳುವುದು ಚೆನ್ನಾಗಿರುವುದೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಮೂರು ದಿವಸಗಳ ಹಿಂದೆ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನಲ್ಲಿ ಹರಿಜನ ಹೆಣ್ಣುಮಗಳ ಮೇಲೆ ಅತ್ಯಾಚಾರವಾಗಿದೆ. ನಾಲ್ಕು ಜನರನ್ನು ಬಂಧಿಸಿದ್ದಾರೆ. ಮೊನ್ನೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಎಲ್ಲೊ ಒಂದು ಕಡೆ ಹೇಳಿದ್ದಾರೆ. ಎಸ್.ಪಿ.ಯವರಿಗೆ ಜವಾಬ್ದಾರಿಯನ್ನು ಕೊಟ್ಟಿದ್ದೇನೆಂದು ಇಂತಹ ವಿಚಾರಗಳಲ್ಲಿ ಎಸ್.ಪಿ.ಯವರಿಗೆ ಜವಾಬ್ದಾರಿಯನ್ನು ಕೊಟ್ಟಿದಷ್ಟಕ್ಕೆ ಹೊಣೆದೇನೂ ಅಲ್ಲ. ಲಾ ಅಂಡ್ ಆರ್ಡರ್ ಮೇನ್‌ಟೆನೆನ್ಸ್ ಎಸ್.ಪಿ.ಯವರ ಜವಾಬ್ದಾರಿ. ಈ ಪರ್ಟಿಕಲ್ಯುರ್ ಇನ್ಸಿಡೆಂಟ್ಸ್‌ನಲ್ಲಿ ಏನಾಗಿದೆ ಎನ್ನುವ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಮಾನ್ಯ ಗೃಹಸಚಿವರು ಒಪ್ಪಿದ್ದರು. ದಯಮಾಡಿ ಗೃಹಸಚಿವರು ವಿಷಯವನ್ನು ತಿಳಿಸಬೇಕು. ಈ ರೀತಿ ಪುನರಾವರ್ತನೆಯಾಗಬಾರದು ಆ ದೃಷ್ಟಿಯಿಂದ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಗೃಹಮಂತ್ರಿಗಳನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ ಈ ವಿಷಯದ ಬಗ್ಗೆ ಈಗಾಗಲೇ ಮೇಲನೆಯಲ್ಲಿ, ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದೇನೆ. ಈ ಸದನದಲ್ಲಿ ಕೂಡ ಮಧ್ಯಾಹ್ನ ಒಂದು ಸ್ಟೇಟ್‌ಮೆಂಟ್‌ನ್ನು ಮಾಡುತ್ತೇನೆ. ಈಗ ಒಂದು

ಪ್ರೋಗ್ರಾಮಿಗೆ ಹೋಗಬೇಕಾಗಿದೆ ಅಲ್ಲಿಂದ ಒಂದ ತಕ್ಷಣ ಮಧ್ಯಾಹ್ನ 3 ಗಂಟೆಗೆ ಹೊಳಲ್ಕೆರೆ ಘಟನೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಹೊಂದಿರುವ ಒಂದು ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಪಿ. ರಮೇಶ್ :— ಮಾನ್ಯ ಅಧ್ಯಕ್ಷರೆ ನನಗೆ ಒಂದು ಸೆಕೆಂಡ್ ಅವಕಾಶವನ್ನು ಕೊಡಬೇಕು. ನಾನು ಆ ಕ್ಷೇತ್ರದ ಶಾಸಕ ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ.

ಅಧ್ಯಕ್ಷರು :— ತಾವು ದಯವಿಟ್ಟು ಕುಳಿತುಕೊಳ್ಳಿ. ಪ್ರತಿಯೊಬ್ಬರೂ ಒಂದೊಂದು ಸೆಕೆಂಡ್ ಅಂತ ಎದ್ದರೆ ನಾನೇನು ಮಾಡಲಿ? ಇನ್ನು ಬೇಕಾದಷ್ಟು ಬಿಲ್‌ಗಳಿವೆ. ಇದೇನು ಜೀರೋ ಅವರ್ ಅಲ್ಲ.

ಶ್ರೀ ಎಂ. ಚಂದ್ರಪ್ಪ :— ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಕ್ಷೇತ್ರದ ಶಾಸಕರು ಅವರು ಏನು ಹೇಳುತ್ತಾರೆಂಬುದನ್ನು ತಾವು ಕೇಳಬೇಕಾಗುತ್ತದೆ.

ಅಧ್ಯಕ್ಷರು :— ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ ಆಮೇಲೆ ಕ್ಲಾರಿಫಿಕೇಷನ್ ಕೇಳಿ.

3. ಶಾಸನ ರಚನೆ

ಎ) ವಿಧೇಯಕ ಮಂಡನೆ

(i) ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯಗಳ (ತಿದ್ದುಪಡಿ) ವಿಧೇಯಕ, 2000.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, 'ಕರ್ನಾಟಕ ವಿಧಾನ ಮಂಡಲದವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯಗಳ (ತಿದ್ದುಪಡಿ) ವಿಧೇಯಕ, 2000' ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನ ಮಂಡಲದವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯಗಳ (ತಿದ್ದುಪಡಿ) ವಿಧೇಯಕ, 2000. ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.